# ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

## Center of Excellence for Farmer Producer Organization

# ಕರುನಾಡ ಎಫ್.ಪಿ.ಒ ಸಮಾಚಾರ

ತ್ರೈಮಾಸಿಕ ಇ-ಸುದ್ದಿ ಪತ್ರಿಕೆ

ಸಂಚಿಕೆ 3 • ಜುಲೈ 2022

www.coefpo.org





## ಜಲಾನಯನ ಅಭಿವೃದ್ಧಿ ಇಲಾಖೆಯ ವತಿಯಿಂದ ಅತ್ಯುತ್ತಮ ರೈತ ಉತ್ಪಾದಕರ ಸಂಸ್ಥೆಗಳಿಗೆ ಪ್ರಶಸ್ತಿ ಪ್ರದಾನ ಹಾಗೂ ಏಕರೂಪ ಬ್ರ್ಯಾಂಡಿಂಗ್ ಸ್ಪರ್ಧೆಯ ಅನಾವರಣ

ಜಲಾನಯನ ಅಭಿವೃದ್ಧಿ ಇಲಾಖೆ ಆಯೋಜಿಸಿದ್ದ ವಿಶ್ವಬ್ಯಾಂಕ್ ನೆರವಿನ **ರಾಷ್ಟ್ರಮಟ್ಟದ ರಿವಾರ್ಡ್ ಯೋಜನೆ, ಜಲಾನಯನ ಉತ್ಕೃಷ್ಟತಾ ಕೇಂದ್ರದ ಉದ್ಘಾಟನೆ, ರೈತ ಉತ್ಪಾದಕರ ಸಂಸ್ಥೆಗಳ ಏಕರೂಪ ಬ್ರ್ಯಾಂಡಿಂಗ್ ಸ್ಪರ್ಧೆಯ ಅನಾವರಣ** ಹಾಗೂ **ಅತ್ಯುತ್ತಮ ರೈತ ಉತ್ಪಾದಕರ ಸಂಸ್ಥೆಗಳಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು** 5 ಮೇ 2022 ರಂದು ಡಾ.ಬಾಬು ರಾಜೇಂದ್ರಪ್ರಸಾದ್ ಸಭಾಂಗಣ, ಜಿಕೆವಿಕೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮಾನ್ಯ ಮುಖ್ಯಮಂತ್ರಿ ಶ್ರೀ. ಬಸವರಾಜ ಬೊಮ್ಮಾಯಿ, ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವೆ ಸುಶ್ರೀ ಶೋಭಾ ಕರಂದ್ಲಾಜೆ, ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾದ ಶ್ರೀ. ಗಿರಿರಾಜ್‌ಸಿಂಗ್, ಕೃಷಿ ಸಚಿವರಾದ ಶ್ರೀ. ಬಿ.ಸಿ. ಪಾಟೀಲ್, ತೋಟಗಾರಿಕೆ ಸಚಿವರಾದ ಶ್ರೀ. ಮುನಿರತ್ನ, ಸಹಕಾರ ಸಚಿವರಾದ ಶ್ರೀ. ಎಸ್. ಟಿ. ಸೋಮಶೇಖರ್, ಒಡಿಶಾ ಕೃಷಿ ಮಂತ್ರಿಗಳಾದ ಶ್ರೀ. ಅರುಣ್ ಸಾಹು ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಈ ಸುಸಂದರ್ಭದಲ್ಲಿ ಸಣ್ಣ ಹಾಗೂ ಅತೀ ಸಣ್ಣ ರೈತರನ್ನು ಒಗ್ಗೂಡಿಸಿ ವಿವಿಧ ಅಭಿವೃದ್ಧಿ ಇಲಾಖೆಗಳ ನೆರವಿನೊಂದಿಗೆ ರಚಿಸಲಾಗಿರುವ ರೈತ ಉತ್ಪಾದಕರ ಕಂಪನಿಗಳಲ್ಲಿ, ವ್ಯಾಪಾರ, ವಹಿವಾಟು ಮತ್ತು ಉತ್ತಮ ಕಾರ್ಯ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿರುವ ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಉತ್ತೇಜಿತವಾದ ತುಮಕೂರು ಜಿಲ್ಲೆಯ ಹಳ್ಳಿಕಾರ್‌ತತ್ವ ರೈತ ಉತ್ಪಾದಕರ ಕಂಪನಿ ಮತ್ತು ಧಾರವಾಡ ಜಿಲ್ಲೆಯ ಅಣ್ಣಿಗೆರೆ ತಾಲೂಕಿನ ರೈತ ಉತ್ಪಾದಕರ ಕಂಪನಿ, ಹಾಗೆಯೇ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತೋಟಗಾರಿಕೆ ಇಲಾಖೆಯಿಂದ ಉತ್ತೇಜಿತವಾದ ಆನೇಕಲ್ ತೋಟಗಾರಿಕೆ ರೈತ ಉತ್ಪಾದಕರ ಕಂಪನಿ ಮತ್ತು ಧಾರವಾಡ ಜಿಲ್ಲೆಯ ಉಳುವಾಯೋಗಿ ತೋಟಗಾರಿಕೆ ರೈತ ಉತ್ಪಾದಕರ ಕಂಪನಿ, ಅದೇ ರೀತಿ ನಬಾರ್ಡ್ ಸಂಸ್ಥೆಯಿಂದ ಪ್ರೋತ್ಸಾಹಿತವಾದ ಹಾವೇರಿ ಜಿಲ್ಲೆಯ ಭೂಸಿರಿ ಸಿರಿಧಾನ್ಯ ರೈತ ಉತ್ಪಾದಕರ ಕಂಪನಿ ಮತ್ತು ರಾಯಚೂರು ಜಿಲ್ಲೆಯ ಸ್ವಾಸ್ತ್ಯ ರೈತ ಉತ್ಪಾದಕರ ಕಂಪನಿಗಳನ್ನು ಸನ್ಮಾನಿಸಲಾಯಿತು.

## ಸಲಹಾ ಸಮಿತಿ

**ಶ್ರೀ. ಐ.ಎಸ್.ಎನ್. ಪ್ರಸಾದ್**
ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು

**ಡಾ. ಕೆ. ಎಂ. ಇಂದಿರೇಶ್**
ಕುಲಪತಿಗಳು,
ತೋ.ವಿ.ವಿ, ಬಾಗಲಕೋಟೆ

**ಶ್ರೀ. ರಾಜೇಂದರ್ ಕುಮಾರ ಕಟಾರಿಯಾ**
ಪ್ರಧಾನ ಕಾರ್ಯದರ್ಶಿಗಳು,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ

**ಶ್ರೀ. ಶಿವಯೋಗಿ ಕಳಸದ**
ಕಾರ್ಯದರ್ಶಿಗಳು,
ಕೃಷಿ ಇಲಾಖೆ

**ಡಾ. ಎಂ. ವಿ. ವೆಂಕಟೇಶ್**
ಆಯುಕ್ತರು,
ಜಲಾನಯನ ಅಭಿವೃದ್ಧಿ ಇಲಾಖೆ

**ಶ್ರೀ. ನಾಗೇಂದ್ರ ಪ್ರಸಾದ್**
ನಿರ್ದೇಶಕರು,
ತೋಟಗಾರಿಕೆ ಇಲಾಖೆ

## ಕೃಷಿ ಆತ್ಮನಿರ್ಭರಗೊಳಿಸಲು ಎಫ್.ಪಿ.ಒ. ವೇದಿಕೆ

ಕೃಷಿ ಇಲಾಖೆ, ಕರ್ನಾಟಕ ಸರ್ಕಾರವು **ಕ್ಲಸ್ಟರ್ ಆಧಾರಿತ ವ್ಯವಹಾರ ಸಂಸ್ಥೆಗಳ (ಸಿಬಿಬಿಒ) ಮತ್ತು ರೈತ ಉತ್ಪಾದಕ ಸಂಸ್ಥೆಗಳ (ಎಫ್‌ಪಿಒ) ಪ್ರಾದೇಶಿಕ ಸಮಾವೇಶವನ್ನು** 27 ಮೇ 2022 ರಂದು ಡಾ. ಬಾಬು ರಾಜೇಂದ್ರ ಪ್ರಸಾದ್ ಸಭಾಂಗಣ, ಜಿಕೆವಿಕೆಯಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಮುಖ್ಯ ಉದ್ದೇಶವು ಸಿಬಿಬಿಒಗಳ ನಡುವೆ ಜ್ಞಾನ ಹಂಚಿಕೆ, ವಿಚಾರ ವಿನಿಮಯ, ಉತ್ತಮ ಸುಧಾರಿತ ಪದ್ಧತಿಗಳ ಅಳವಡಿಕೆ ಮತ್ತು ಮುಂಬರುವ ದಿನಗಳಲ್ಲಿ ರೈತ ಉತ್ಪಾದಕ ಸಂಸ್ಥೆಗಳನ್ನು ಸ್ವಾವಲಂಬನೆಯತ್ತ ಕರೆದೊಯ್ಯಲು ಸರ್ಕಾರದಿಂದ ಸಿಬಿಬಿಒಗಳ ನಿರೀಕ್ಷೆ, ಇತ್ಯಾದಿ. ಈ ಸಮಾರಂಭದಲ್ಲಿ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ಸಚಿವರಾದ ಶ್ರೀ. ಕೈಲಾಶ ಚೌಧರಿ, ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವೆ ಸುಶ್ರೀ ಶೋಭಾ ಕರಂದ್ಲಾಜೆ ಭಾಗವಹಿಸಿದ್ದರು ಮತ್ತು ಕೃಷಿ ಸಚಿವರಾದ ಬಿ.ಸಿ.ಪಾಟೀಲ್ ಅಧ್ಯಕ್ಷತೆಯನ್ನು ವಹಿಸಿದ್ದರು.

ಕೃಷಿಯನ್ನು ಆತ್ಮನಿರ್ಭರವಾಗಿ ಪರಿವರ್ತಿಸಲು ಎಫ್.ಪಿ.ಒ. ಮೆಟ್ಟಿಲಾಗಿವೆ, ಇವು ಪರಿಣಾಮಕಾರಿ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲಿದೆ ಎಂದು ಕೇಂದ್ರ ಕೃಷಿ ಸಚಿವರಾದ ಶ್ರೀ. ಕೈಲಾಶ್ ಚೌಧರಿ ಹೇಳಿದರು. ಎಫ್.ಪಿ.ಒ.ಗಳು ಸಾಂಸ್ಥಿಕ ರಚನೆಗಳಾಗಿದ್ದು, ರೈತರ ನಿವ್ವಳ ಆದಾಯವನ್ನು ಹೆಚ್ಚಿಸುವುದರ ಮೂಲಕ ವಿಶೇಶವಾಗಿ ಗ್ರಾಮೀಣ ಆರ್ಥಿಕತೆಯನ್ನು ಸುಧಾರಿಸುವುದು ಹಾಗೂ ಗ್ರಾಮೀಣ ಯುವಕರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಿವೆ, ಕೃಷಿಯನ್ನು ಸುಸ್ಥಿರ ಉದ್ಯಮವನ್ನಾಗಿ ಪರಿವರ್ತಿಸಲು ಈ ಮೂಲಕ ಸಾಧ್ಯವಾಗಲಿದೆ ಹಾಗೂ ಭಾರತೀಯ ರೈತರು ಎಫ್.ಪಿ.ಒ.ಗಳ ಮುಖಾಂತರ ಜಾಗತಿಕ ಮಟ್ಟದಲ್ಲಿ ಸಾಧನೆ ಮಾಡುವ ಮೂಲಕ ಆತ್ಮನಿರ್ಭರ ಭಾರತ ಸ್ಥಾಪನೆಗೆ ವೇದಿಕೆಯಾಗಿವೆ ಎಂದು ತಿಳಿಸಿದರು.

ಕೇಂದ್ರದ 5 ವರ್ಷಗಳ ಈ ಯೋಜನೆಯಡಿಯಲ್ಲಿ ಎಫ್.ಪಿ.ಒ.ಗಳನ್ನು ಉತ್ತೇಜಿಸುವ ಸಲುವಾಗಿ ಕೇಂದ್ರದ ಒಟ್ಟು ರೂ.6,865.00 ಕೋಟಿಗಳನ್ನು ಮೀಸಲಿಡಲಾಗಿದ್ದು, 6.92 ಲಕ್ಷಕ್ಕೂ ಹೆಚ್ಚು ರೈತರನ್ನು ಸಂಘಟಿಸಲಾಗಿದೆ. ಪ್ರಸ್ತುತ 3.13 ಲಕ್ಷ ರೈತರು ಎಫ್.ಪಿ.ಒ.ಗಳ ಷೇರುದಾರರಾಗಿ ನೋಂದಾಯಿಸಿಕೊಂಡಿದ್ದು, 42.66 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರದ ಎಸ್‌ಎಫ್‌ಎಸಿ ಸಂಸ್ಥೆಯ ವತಿಯಿಂದ

*ಮುಂದುವರಿದಿದೆ....*



## ಕೃಷಿ ಆತ್ಮನಿರ್ಭರಗೊಳಿಸಲು ಎಫ್.ಪಿ.ಒ. ವೇದಿಕೆ

ಪ್ರಯೋಜನ ಪಡೆದಿರುತ್ತಾರೆ, ಇದರಲ್ಲಿ ವಿಶೇಷವಾಗಿ 227 ಮಹಿಳಾ ಸದಸ್ಯರಿಂದ ಕೂಡಿದ ಎಫ್.ಪಿ.ಒ.ಗಳನ್ನು ನೋಂದಾಯಿಸಿದ್ದಾರೆ ಮತ್ತು 525 ಎಫ್.ಪಿ.ಒ.ಗಳನ್ನು ಬುಡಕಟ್ಟು ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿದೆ.

ರೈತರ ಕೃಷಿ ಕೆಲಸಗಳನ್ನು ಸುಲಭಗೊಳಿಸುವ ಸಲುವಾಗಿ ಕೇಂದ್ರ ಸರ್ಕಾರವು ಡ್ರೋನ್ ಸೇರಿದಂತೆ ಹಲವು ತಂತ್ರಜ್ಞಾನಗಳನ್ನು ಪರಿಚಯಿಸುತ್ತಿದೆ ಮತ್ತು ಆ ಚಟುವಟಿಕೆಗಳಿಗೆ ಪೂರಕವಾದ ಯಂತ್ರೋಪಕರಣಗಳನ್ನು ಸಹಾಯಧನಗಳ ಮೂಲಕ ನೀಡುತ್ತಿದೆ. ಇದರಿಂದ ಸಣ್ಣ ಮತ್ತು ಅತೀ ಸಣ್ಣ ರೈತರು ಕೃಷಿ ಕಾರ್ಮಿಕರಿಗಾಗಿ ಪರದಾಡುವಂತಿಲ್ಲ ಎಂದು ತಿಳಿಸಿದರು.

ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಖಾತೆ ಸಚಿವೆ ಸುಶ್ರೀ ಶೋಭಾ ಕರಂದ್ಲಾಜೆ ಮಾತನಾಡಿ, ದೇಶದಲ್ಲಿರುವ ಸಣ್ಣ ಮತ್ತು ಅತೀ ಸಣ್ಣ ರೈತರ ಜೀವನವನ್ನು ಸುಧಾರಿಸುವುದಕ್ಕಾಗಿ ದೇಶಾದ್ಯಂತ 10 ಸಾವಿರ ಎಫ್‌ಪಿಒ ಸ್ಥಾಪನೆ ಮಾಡಲಾಗುತ್ತಿದೆ. ಈ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಎಫ್‌ಪಿಒಗಳ ಮೂಲಕ ಕೃಷಿ ಆಧಾರಿತ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಇತರ ಚಟುವಟಿಕೆಗಳನ್ನು ಕೈಗೊಂಡು ಕೃಷಿಯನ್ನು ಉದ್ಯಮವಾಗಿ ಪರಿವರ್ತಿಸುವುದರ ಮೂಲಕ ಗ್ರಾಮೀಣ ಯುವ ಜನತೆಗೆ ಸ್ವಾವಲಂಬನೆಯಿಂದ ಬದುಕಲು ಅವಕಾಶಗಳನ್ನು ಕಲ್ಪಿಸಲಾಗುತ್ತಿದೆ ಎಂದು ಹೇಳಿದರು.

ರಾಜ್ಯ ಕೃಷಿ ಸಚಿವರಾದ ಶ್ರೀ.ಬಿ.ಸಿ.ಪಾಟೀಲ್ ಮಾತನಾಡಿ ಎಫ್.ಪಿ.ಒ.ಗಳು ತಯಾರಿಸಿದ ಕೃಷಿ ಉತ್ಪನ್ನಗಳನ್ನು ಜಾಗತಿಕವಾಗಿ ವಿದೇಶಗಳಿಗೆ ರಫ್ತು ಮಾಡಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಗಾಣಿಕಾ ವೆಚ್ಚವಾಗುತ್ತಿದೆ. ಕೇಂದ್ರ ಸರ್ಕಾರವು ರೈತರ ರಫ್ತು ವಹಿವಾಟು ಉತ್ತೇಜಿಸಲು ಮತ್ತು ಪ್ರೋತ್ಸಾಹಿಸಲು ವಿಶೇಷ ನೂತನ ಅಂತಾರಾಷ್ಟ್ರೀಯ ಸಾಗಾಣಿಕಾ ವೆಚ್ಚಕ್ಕೆ ರಿಯಾಯಿತಿ ನೀಡುವ ಯೋಜನೆಯನ್ನು ಜಾರಿಗೊಳಿಸಬೇಕು ಎಂದು ಕೇಂದ್ರದ ಸಚಿವರುಗಳಿಗೆ ಒತ್ತಾಯಿಸಿದರು.

ಈ ಸಮಾರಂಭದಲ್ಲಿ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆ ಮಾರುಕಟ್ಟೆ ವಿಭಾಗದ ಜಂಟಿ ಕಾರ್ಯದರ್ಶಿಗಳಾದ ಡಾ.ಎನ್.ವಿಜಯಲಕ್ಷ್ಮಿ, ನಮ್ಮ ರಾಜ್ಯದ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಡಾ. ರಾಜೇಂದ್ರ ಕುಮಾರ್ ಕಟಾರಿಯಾ, ಜಲಾನಯನ ಅಭಿವೃದ್ಧಿ ಇಲಾಖೆ ಆಯುಕ್ತರಾದ ಡಾ.ಎಂ.ವಿ. ವೆಂಕಟೇಶ್, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ನಿರ್ದೇಶಕರಾದ ಡಾ.ಅಶೋಕ ಎಸ್. ಆಲೂರ, ರಾಜ್ಯ ಕೃಷಿ ಇಲಾಖೆಯ ನಿರ್ದೇಶಕರಾದ ಡಾ. ನಂದಿನಿಕುಮಾರಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಯ ನಿರ್ದೇಶಕರಾದ ಶ್ರೀ. ಶೀನಿವಾಸ ರವರು ಉಪಸ್ಥಿತರಿದ್ದರು.

## ವಾಲ್‌ಮಾರ್ಟ್ ಮತ್ತು ಎಸ್.ಎಂ. ಸೆಹಗಲ್ ಫೌಂಡೇಶನ್ ಇವರ ಸಹಭಾಗಿತ್ವದಲ್ಲಿ ಉತ್ತರ ಪ್ರದೇಶ ಮತ್ತು ಕರ್ನಾಟಕದಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಉತ್ತೇಜನ

ಎಸ್.ಎಂ. ಸೆಹಗಲ್ ಫೌಂಡೇಶನ್ ಮತ್ತು ವಾಲ್‌ಮಾರ್ಟ್ ಫೌಂಡೇಶನ್ 18 ಮೇ 2022 ರಂದು ರೂ. 7 ಕೋಟಿ ಅನುದಾನದೊಂದಿಗೆ **"ಉತ್ತರ ಪ್ರದೇಶ ಮತ್ತು ಕರ್ನಾಟಕದಲ್ಲಿ ರೈತ ಉತ್ಪಾದಕ ಸಂಸ್ಥೆಗಳನ್ನು ಉತ್ತೇಜಿಸುವ"** ಎರಡು ವರ್ಷಗಳ ಯೋಜನೆಯನ್ನು ಅನುಷ್ಠಾನಗೊಳಿಸುವುದಾಗಿ ಘೋಷಿಸಿದೆ. ಈ ಯೋಜನೆಯು ಉತ್ತರ ಪ್ರದೇಶ ಮತ್ತು ಕರ್ನಾಟಕ ರಾಜ್ಯಗಳಲ್ಲಿನ 10 ಎಫ್‌ಪಿಒಗಳಿಗೆ ನೆರವಾಗಲಿದೆ ಹಾಗೂ ನೇರವಾಗಿ 5,000 ಎಫ್‌ಪಿಒ ಸದಸ್ಯರನ್ನು ಮತ್ತು ಪರೋಕ್ಷವಾಗಿ 25,000 ಎಫ್‌ಪಿಒ ಕುಟುಂಬ ಸದಸ್ಯರಿಗೆ ತಲುಪುತ್ತದೆ.

ಈ ಯೋಜನೆಯು ಕರ್ನಾಟಕದ ಕೋಲಾರ ಮತ್ತು ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ಸಮುದಾಯಗಳನ್ನು ಸಂಘಟಿಸುವ ಮೂಲಕ ಎಫ್‌ಪಿಒಗಳನ್ನು ಬಲಪಡಿಸುವ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಸದರಿ ಯೋಜನೆಯು ವೈಜ್ಞಾನಿಕ ಕೃಷಿ ಪದ್ಧತಿಗಳು, ಹಣಕಾಸಿನ ಲಭ್ಯತೆ, ಕೃಷಿ ಪರಿಕರಗಳ ಪೂರೈಕೆ, ತಂತ್ರಜ್ಞಾನಗಳ ಅಳವಡಿಕೆ, ಮಾರುಕಟ್ಟೆಗಳ ಲಭ್ಯತೆ ಮತ್ತು ಮಹಿಳಾ ಸಬಲೀಕರಣದಂತಹ ಅಂಶಗಳಿಂದ ಕೇಂದ್ರೀಕೃತವಾಗಿದೆ.



# ಪ್ರಚಲಿತ ಎಫ್.ಪಿ.ಓ ಸುದ್ದಿಗಳು

**ನಮ್ಮ ರಾಜ್ಯದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವುದರ ಮೂಲಕ ಪ್ರಶಸ್ತಿ ಪಡೆದ ರೈತ ಉತ್ಪಾದಕರ ಸಂಸ್ಥೆಗಳು**

### 1. ಹಳ್ಳಿಕಾರ್‌ತತ್ವ ರೈತ ಉತ್ಪಾದಕರ ಕಂಪನಿ, ತುರುವೇಕೆರೆ ತಾಲೂಕು, ತುಮಕೂರು ಜಿಲ್ಲೆ

ಈ ಕಂಪನಿಯು ಜಲಾನಯನ ಅಭಿವೃದ್ಧಿ ಇಲಾಖೆಯಿಂದ 2020 ರಲ್ಲಿ ರಚನೆಯಾಗಿದ್ದು, 500 ಷೇರುದಾರರನ್ನು ಹೊಂದಿದೆ. ರೈತರಿಗೆ ಅವಶ್ಯಕವಿರುವ ಕೃಷಿ ಪರಿಕರಗಳಾದ ಸಾವಯವ ಗೊಬ್ಬರ, ಬಿತ್ತನೆ ಮತ್ತು ಮೇವಿನ ಬೆಳೆಗಳ ಬೀಜಗಳನ್ನು ಕಡಿಮೆ ದರದಲ್ಲಿ ಸದಸ್ಯರಿಗೆ ಮಾರಾಟ ಮಾಡುತ್ತಿದ್ದಾರೆ. ಅದೇ ರೀತಿ ತಾವು ಬೆಳೆದ ಉತ್ಪನ್ನಗಳನ್ನು **"ಹಳ್ಳಿಕಾರ್ ಬ್ರಾಂಡ್"** ಹೆಸರಿನಲ್ಲಿ ಮಾರಾಟ ಮಾಡುತ್ತಿದ್ದು, ಕಲ್ಪರಸವನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ತಯಾರಿಸುವ ಪ್ರಕ್ರಿಯೆಯಲ್ಲಿ ಮುಂಚೂಣಿಯಲ್ಲಿದ್ದಾರೆ. ಈ ಕಂಪನಿಯು ಕೊಬ್ಬರಿಯನ್ನು ರೈತರಿಂದ ಸಂಗ್ರಹಿಸಿ ವರ್ಗೀಕರಣ ಮಾಡಿ ಹಾಂಗ್‌ಕಾಂಗ್ ದೇಶಕ್ಕೆ ರಫ್ತು ಮಾಡಲಾಗಿದ್ದು, ಬಂದಿರುವ ಲಾಭವನ್ನು ವ್ಯವಹರಿಸಿದ ಷೇರುದಾರರಿಗೆ ಹಂಚಿಕೆ ಮಾಡಿದೆ. ಈ ಕಂಪನಿಯು ಆರ್ಥಿಕ ವರ್ಷ 2021–22 ರಲ್ಲಿ ರೂ.75.00 ಲಕ್ಷಗಳ ವ್ಯಾಪಾರ ವಹಿವಾಟನ್ನು ಮಾಡಿದೆ.

---

### 2. ಅಣ್ಣಿಗೆರೆ ತಾಲೂಕ ರೈತ ಉತ್ಪಾದಕರ ಕಂಪನಿ, ಅಣ್ಣಿಗೆರೆ ತಾಲೂಕು, ಧಾರವಾಡ ಜಿಲ್ಲೆ

ಧಾರವಾಡ ಜಿಲ್ಲೆಯ ಜಲಾನಯನ ಅಭಿವೃದ್ಧಿ ಇಲಾಖೆಯ ವತಿಯಿಂದ 2021 ರಲ್ಲಿ ಅಣ್ಣಿಗೆರೆ ತಾಲೂಕ ರೈತ ಉತ್ಪಾದಕರ ಕಂಪನಿಯ ರಚನೆಗೆ ಚಾಲನೆ ನೀಡಿದ್ದು ಪ್ರಸ್ತುತ 767 ಷೇರುದಾರರೊಂದಿಗೆ ಕಾರ್ಯ ನಿರ್ವಹಿಸುತ್ತಿದೆ. ಸದರಿ ಸಂಸ್ಥೆಯು ವಿವಿಧ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಕಡಿಮೆ ಬಾಡಿಗೆ ಆಧಾರದ ಮೇಲೆ ಒದಗಿಸುತ್ತಿದೆ. ಸೂರ್ಯಕಾಂತಿ, ಕುಸುಬೆ ಮತ್ತು ಶೇಂಗಾ ಬೆಳೆಗಳ ಎಣ್ಣೆಯನ್ನು ಉತ್ಪಾದಿಸಿ **"ಅಣ್ಣಿಗೆರೆ ಬ್ರಾಂಡ್"** ಹೆಸರಿನಲ್ಲಿ ಉತ್ಪನ್ನಗಳನ್ನು ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡಲಾಗುತ್ತಿದೆ. ಇದಲ್ಲದೆ, ಕಡಲೆ ಮತ್ತು ಮೆಕ್ಕೆ ಜೋಳವನ್ನು ರೈತರಿಂದ ನೇರವಾಗಿ ಖರೀದಿಸಿ ಪ್ರಾಥಮಿಕ ಸಂಸ್ಕರಣೆ ಕೈಗೊಂಡು ವಿವಿಧ ಕಂಪನಿಗಳಿಗೆ ಮಾರಾಟ ಮಾಡಲಾಗಿದೆ. ದಿನಾಂಕ 21.04.2022 ರಂದು ದೆಹಲಿಯಲ್ಲಿ ನಡೆದ ರಾಷ್ಟ್ರ ಮಟ್ಟದ ಸಿಬಿಬಿಓಗಳ ಕಾರ್ಯಾಗಾರದಲ್ಲಿ ಭಾಗವಹಿಸಿ ಮೆಚ್ಚುಗೆಯನ್ನು ಪಡೆದಿದ್ದಾರೆ. ಈ ಕಂಪನಿಯು ಆರ್ಥಿಕ ವರ್ಷ 2021–22 ರಲ್ಲಿ ರೂ.1.50 ಕೋಟಿಗಳ ವ್ಯಾಪಾರ ವಹಿವಾಟನ್ನು ಮಾಡಿದೆ.




---



### 3. ಆನೇಕಲ್ ತೋಟಗಾರಿಕೆ ರೈತ ಉತ್ಪಾದಕರ ಕಂಪನಿ, ಆನೇಕಲ್, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಆನೇಕಲ್ ತೋಟಗಾರಿಕೆ ರೈತ ಉತ್ಪಾದಕರ ಕಂಪನಿಯು 2016 ರಲ್ಲಿ ತೋಟಗಾರಿಕೆ ಇಲಾಖೆಯಿಂದ ಪ್ರೋತ್ಸಾಹಿತಗೊಂಡು 1,000 ಷೇರುದಾರರೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಈ ಕಂಪನಿಯು ಪರಿಕರಗಳನ್ನು ಕಡಿಮೆ ದರದಲ್ಲಿ ರೈತರಿಗೆ ಸರಬರಾಜು ಮಾಡುವದಲ್ಲದೆ ವಿವಿಧ ತರಕಾರಿಗಳನ್ನು ಸಂಗ್ರಹಿಸಿ ಖಾಸಗಿ ಸಂಸ್ಥೆಗಳಾದ ಜೋಮ್ಯಾಟೊ, ವೇಕೂಲ್ ಮತ್ತು ಉಡಾನ್ ಕಂಪನಿಗಳಿಗೆ ಮಾರಾಟ ಮಾಡಿದೆ. ಇದಲ್ಲದೆ ಸರ್ಕಾರದ ಮಳಿಗೆಗಳಾದ ನಂದಿನಿ ಮತ್ತು ಹಾಪ್‌ಕಾಮ್ಸ್ ಗಳಲ್ಲಿಯೂ ಸಹ ಮಾರಾಟ ಮಾಡಲಾಗುತ್ತಿದೆ. ಈ ಕಂಪನಿಯು ಆರ್ಥಿಕ ವರ್ಷ 2021–22 ರಲ್ಲಿ ರೂ.5.737 ಕೋಟಿ ವ್ಯಾಪಾರ ವಹಿವಾಟಿನ ಗುರಿ ಮುಟ್ಟಿರುತ್ತದೆ.

---

### 4. ಉಳುವಾಯೋಗಿ ತೋಟಗಾರಿಕೆ ರೈತ ಉತ್ಪಾದಕರ ಕಂಪನಿ, ಹುಬ್ಬಳ್ಳಿ ತಾಲೂಕು, ಧಾರವಾಡ ಜಿಲ್ಲೆ

ಈ ಕಂಪನಿಯು 2016 ರಲ್ಲಿ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕಿನಲ್ಲಿ ತೋಟಗಾರಿಕೆ ಇಲಾಖೆಯ ವತಿಯಿಂದ ಉತ್ತೇಜಿತವಾಗಿದ್ದು, 1,000 ಷೇರುದಾರರನ್ನು ಹೊಂದಿರುತ್ತದೆ. ಸ್ಥಳೀಯವಾಗಿ ಹೆಚ್ಚಾಗಿ ಬೆಳೆಯುವ ಬ್ಯಾಡಗಿ ಮೆಣಸಿನಕಾಯಿಯ ಮಾರುಕಟ್ಟೆ ಸಂಪರ್ಕಕ್ಕಾಗಿ ಪ್ರತಿಷ್ಠಿತ ಎಮ್‌ಟಿಆರ್ ಕಂಪನಿಯೊಂದಿಗೆ ಯಶಸ್ವಿ ಸಹಭಾಗಿತ್ವವನ್ನು ಹೊಂದಿ, ಕಂಪನಿಯ ಆದಾಯವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ. ಇದಲ್ಲದೆ ಈರುಳ್ಳಿ ಮತ್ತು ಮಾವಿನ ಬೆಳೆಗಳಿಗೂ ಮಾರಾಟ ವಿಸ್ತರಿಸಲಾಗಿದ್ದು, ಮೆಣಸಿನಕಾಯಿ ಮತ್ತು ಇತರೆ ಬೆಳೆಗಳ ಸಂಗ್ರಹಣೆ ಮತ್ತು ಮಾರಾಟಕ್ಕಾಗಿ ಉತ್ತಮ ಗುಣಮಟ್ಟದ ಉಗ್ರಾಣಗಳನ್ನು ಹೊಂದಿದ್ದಾರೆ. ಆರ್ಥಿಕ ವರ್ಷ 2021–22 ರಲ್ಲಿ ಈ ಕಂಪನಿಯು ರೂ.8.00 ಕೋಟಿಗಳ ವ್ಯಾಪಾರ ವಹಿವಾಟನ್ನು ಮಾಡಿ ಯಶಸ್ಸಿನ ಹಾದಿಯಲ್ಲಿ ಸಾಗಿದೆ.



# ಪ್ರಚಲಿತ ಎಫ್.ಪಿ.ಒ ಸುದ್ದಿಗಳು

### 5. ಭೂಸಿರಿ ಸಿರಿಧಾನ್ಯ ರೈತ ಉತ್ಪಾದಕರ ಕಂಪನಿ, ಸಂಗೂರು, ಹಾವೇರಿ ಜಿಲ್ಲೆ

ಭೂಸಿರಿ ಸಿರಿಧಾನ್ಯ ರೈತ ಉತ್ಪಾದಕರ ಕಂಪನಿಯು 2019 ರಲ್ಲಿ ನಬಾರ್ಡ್‌ನ ಕೇಂದ್ರ ಯೋಜನೆಯಲ್ಲಿ ರಚಿಸಲಾಗಿದ್ದು, 370 ಷೇರುದಾರರನ್ನು ಹೊಂದಿರುತ್ತದೆ. ವಿವಿಧ ಸಿರಿ ಧಾನ್ಯಗಳಾದ ನವಣೆ, ಕೊರಲೆ, ಹಾರಕ, ಬರಗು ಇತ್ಯಾದಿಗಳನ್ನು ವಿಂಗಡಣೆ, ವರ್ಗೀಕರಣ ಹಾಗೂ ಮೌಲ್ಯವರ್ಧನೆ ಮಾಡಿ "ಭೂಸಿರಿ ಬ್ರಾಂಡ್" ಹೆಸರಿನಲ್ಲಿ ಉತ್ಪನ್ನಗಳನ್ನು ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡಲಾಗುತ್ತಿದೆ. ಸದರಿ ರೈತ ಉತ್ಪಾದಕರ ಕಂಪನಿಯು ಬಾಡಿಗೆ ಆಧಾರಿತ ಯಂತ್ರೋಪಕರಣಗಳ ಸೇವಾ ಕೇಂದ್ರವನ್ನು ಸ್ಥಾಪಿಸಿ ರೈತರಿಗೆ ಕಡಿಮೆ ಬಾಡಿಗೆ ದರದಲ್ಲಿ ಯಂತ್ರೋಪಕರಣಗಳ ಸೇವೆ ಒದಗಿಸುತ್ತಿದೆ. ಅಲ್ಲದೆ ಈ ಕಂಪನಿಯ ಉತ್ಪನ್ನಗಳು ಉತ್ತಮ ಗುಣಮಟ್ಟದ್ದಾಗಿದ್ದು ಹೊರ ದೇಶಗಳಿಂದಲೂ ಸಹ ಬೇಡಿಕೆ ಬಂದಿರುತ್ತದೆ.



## ಎಫ್.ಪಿ.ಒ.ಗಳ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ

ರೈತ ಉತ್ಪಾದಕ ಸಂಸ್ಥೆಗಳು ಉತ್ತಮವಾಗಿ ಕಾರ್ಯ ನಿರ್ವಹಿಸಬೇಕಾದರೆ, ಸಂಸ್ಥೆಗಳು ಉತ್ತಮ ಮುಖ್ಯಕಾರ್ಯನಿರ್ವಹಣಾಧಿಕಾರಿಗಳನ್ನು (ಸಿಇಒ) ಹೊಂದಬೇಕಾಗಿರುತ್ತದೆ. ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ರೈತ ಉತ್ಪಾದಕ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಅವಲೋಕಿಸಿದಾಗ, ಸಿಇಒಗಳು ರೈತ ಸದಸ್ಯರ ಮನಃಸ್ಥಿತಿ ಅರಿಯುವುದರೊಂದಿಗೆ ವ್ಯವಹಾರಿಕ ಚಾಣಾಕ್ಷತೆ ಮತ್ತು ಕಂಪನಿ ಕಾಯ್ದೆಯ ತಿಳುವಳಿಕೆ ಹೊಂದಿದ್ದಲ್ಲಿ ಅಂತಹ ರೈತ ಉತ್ಪಾದಕರ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ಸಾಮಾನ್ಯವಾಗಿ ಕಂಡುಬಂದಿರುತ್ತದೆ. ಆದ್ದರಿಂದ, ಆರಂಭಿಕ ಹಂತದಲ್ಲೆ ನಾಯಕತ್ವ ಹೊಂದಿದ ಯುವಕ/ಯುವತಿಯರನ್ನು ಗುರುತಿಸಿ ತರಬೇತಿ ನೀಡುವುದು ಅತ್ಯಗತ್ಯವಾಗಿದೆ. ಅದರಲ್ಲೂ ಮಹಿಳಾ ಸಿಇಒಗಳಾಗಿದ್ದರೆ ಅಂತಹ ತರಬೇತಿಗಳಿಗೆ ಇನ್ನೂ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕಾಗುತ್ತದೆ. ಈ ನಿಟ್ಟಿನಲ್ಲಿ, ತೋಟಗಾರಿಕೆ ಇಲಾಖೆಯಿಂದ ಪ್ರೋತ್ಸಾಹಿತ 17 ರೈತ ಉತ್ಪಾದಕರ ಸಂಸ್ಥೆಗಳಲ್ಲಿ ಸಿಇಒಗಳಾಗಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಸಿಇಒಗಳ ಅಗತ್ಯತೆಗಳನ್ನು ಅರಿಯುವ ಪ್ರಯತ್ನ ಮಹಿಳಾ ದಿನಾಚರಣೆಯ ಪ್ರಯುಕ್ತ ಮಾಡಲಾಯಿತು.

ಮಹಿಳೆಯರಲ್ಲಿರುವ ನಾಯಕತ್ವ ಗುಣಗಳನ್ನು ಗುರುತಿಸುವುದಲ್ಲದೇ, ಅವರು ವೃತ್ತಿ ಬದುಕಿನಲ್ಲಿ ಎದುರಿಸುತ್ತಿರುವ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಲು ಪೂರ್ವಭಾವಿ ಸಭೆಯಾಗಿದ್ದು, ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ನಿರ್ದೇಶಕರು ಹಾಗೂ ತೋಟಗಾರಿಕೆಯ ಇತರೆ ಹಿರಿಯ ಅಧಿಕಾರಿಗಳು, ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿ ಮಾರ್ಗದರ್ಶನ ನೀಡಿದರು. ಕೃಷಿ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಿಸಲು ರೈತ ಉತ್ಪಾದಕರ ಸಂಸ್ಥೆಗಳು ಉತ್ತಮ ವೇದಿಕೆಯಾಗಿದ್ದು, ಇದನ್ನು ಸಾಕಾರಗೊಳಿಸಲು ಸೂಕ್ತ ವಾತಾವರಣ ರೂಪಿಸುವುದು ಆದ್ಯತೆಯಾಗಿದೆ.



# ಪ್ರಚಲಿತ ಎಫ್.ಪಿ.ಒ ಸುದ್ದಿಗಳು

## ಮಲೇಷ್ಯಾ ಮಾರುಕಟ್ಟೆಗೆ ಗುಲಾಬಿ ಈರುಳ್ಳಿ




ಉತ್ತಮ ಗುಣಮಟ್ಟದ ಹಾಗೂ ವಿಶೇಷ ಸ್ವಾದದಿಂದ ಕೂಡಿದ ಭೌಗೋಳಿಕ ಮಾನ್ಯತೆ ಪಡೆದ **"ಬೆಂಗಳೂರು ಗುಲಾಬಿ ಈರುಳ್ಳಿ"** ಗೆ ವಿದೇಶಿ ಮಾರುಕಟ್ಟೆಗಳಲ್ಲಿ ಉತ್ತಮ ಬೇಡಿಕೆಯಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲೂಕಿನ ಸಾದಲಿಯಮ್ಮ ತೋಟಗಾರಿಕಾ ರೈತ ಉತ್ಪಾದಕರ ಕಂಪನಿ ಮತ್ತು ಬಾಗೇಪಲ್ಲಿ ತಾಲೂಕಿನ ಚೇಳೂರು ತೋಟಗಾರಿಕಾ ರೈತ ಉತ್ಪಾದಕರ ಕಂಪನಿ ಸೇರಿ ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ (ಅಪೆಡಾ), ತೋಟಗಾರಿಕೆ ಇಲಾಖೆ ಪ್ರೋತ್ಸಾಹದೊಂದಿಗೆ ಎಲ್7ಎಚ್ ನ್ಯಾಚುರಲ್ ರಿಸೋರ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ಜೊತೆಗೆ ಒಪ್ಪಂದ ಕೃಷಿ ಮಾಡಿಕೊಂಡು, ರೈತರು ನಿರೀಕ್ಷೆಗೆ ತಕ್ಕಂತೆ ಆದಾಯ ಹಾಗೂ ಲಾಭ ಗಳಿಸಿಕೊಂಡಿದ್ದಾರೆ. ಕಾರ್ಮಿಕರ ದಿನವಾದ ಮೇ 1, 2022 ರಂದು 22 ಮೆಟ್ರಿಕ್ ಟನ್‌ನ (ತಲಾ 50 ಕೆಜಿಯ 4,500 ಮೂಟೆಗಳು) ಮೊದಲ ಕಂಟೇನರ್‌ಗೆ ಹಸಿರು ನಿಶಾನೆ ಪಡೆದು ಚೆನ್ನೈ ಬಂದರು ಮೂಲಕ ಮಲೇಷ್ಯಾದ ಕೌಲಾಲಂಪುರ ಮಾರುಕಟ್ಟೆಗೆ ಸಾಗುತ್ತಿದ್ದಂತೆ ಅನ್ನದಾತರು ಹಾಗೂ ಶ್ರಮಿಸಿದವರು ಸಂತಸಭರಿತರಾಗಿದ್ದಾರೆ. ದಲ್ಲಾಳಿಗಳು ಮತ್ತು ಹೆಚ್ಚಿನ ದರದ ಆಮಿಷವೊಡ್ಡುವ ವರ್ತಕರ ಮಾತಿಗೆ ಮರಳಾಗದೆ ವೃತ್ತಿಪರ ರೈತರ ರೀತಿಯಲ್ಲಿ ಬೆಳೆ ಮತ್ತು ಮಾರಾಟ ಮಾಡಿ ಯಶಸ್ಸನ್ನು ಗಳಿಸಿದ್ದಾರೆ.



ಒಪ್ಪಂದದ ಪ್ರಕಾರ, ಪ್ರತಿ ವಾರ ಮೂರು ಕಂಟೇನರ್‌ಗಳಂತೆ ಮುಂದಿನ ಮೂರು ತಿಂಗಳೊಳಗೆ 2,000 ಮೆಟ್ರಿಕ್ ಟನ್ ರಫ್ತು ಮಾಡುವ ಗುರಿಯಿಟ್ಟುಕೊಂಡಿದೆ. ಸ್ಥಳೀಯ ಮಾರುಕಟ್ಟೆಯಲ್ಲಿ "ಎ" ಗ್ರೇಡ್ ಈರುಳ್ಳಿಗೆ ಕ್ವಿಂಟಾಲ್‌ಗೆ 900 ರೂ. ಸಿಗುತ್ತಿದ್ದು, ಒಪ್ಪಂದ ಕೃಷಿ ಮೂಲಕ ಬೆಳೆದು, ರಫ್ತು ಮಾಡಿದ್ದರಿಂದ 1,300 ರೂ. ಸಿಕ್ಕಿದೆ ಎಂದು ಸಾದಲಿಯಮ್ಮ ಎಫ್.ಪಿ.ಒ ಅಧ್ಯಕ್ಷ ಡಿ.ಶ್ರೀನಿವಾಸ ಹಾಗೂ ಚೇಳೂರು ಎಫ್.ಪಿ.ಒ ಅಧ್ಯಕ್ಷ ಕೆ. ಸಹದೇವರೆಡ್ಡಿ ಸಂತಸ ವ್ಯಕ್ತಪಡಿಸಿದ್ದಾರೆ. ಖಾಸಗಿ ಕಂಪನಿಯು ಸಾದಲಿಯಲ್ಲಿ ಅತ್ಯಾಧುನಿಕ ಗುಣಮಟ್ಟದ ವರ್ಗೀಕರಣ ಮತ್ತು ಪ್ಯಾಕಿಂಗ್ ಕೇಂದ್ರವನ್ನು ಸ್ಥಾಪಿಸಿದೆ. "ಎ" ಗ್ರೇಡ್ ಈರುಳ್ಳಿ ಕೆಜಿಗೆ 27 ರೂ., "ಬಿ" ಗ್ರೇಡ್‌ಗೆ 22 ರೂ. ಮತ್ತು "ಸಿ" ಗ್ರೇಡ್‌ಗೆ 17 ರೂ. ನಂತೆ ಒಪ್ಪಂದ ದರ ನಿಗದಿಯಾಗಿದೆ. ಈರುಳ್ಳಿ ಬೆಳೆಯುವುದಕ್ಕೆ ಪ್ರತಿ ಎಕರೆಗೆ 85–90,000 ರೂ. ವೆಚ್ಚವಾಗುತ್ತದೆ. ಎಕರೆಗೆ 8–9 ಟನ್ ಇಳುವರಿ ಲಭ್ಯವಾಗುತ್ತಿದ್ದು ಎ, ಬಿ ಮತ್ತು ಸಿ ಗುಣದರ್ಜೆಯ ಬೆಲೆ ಒಪ್ಪಂದದ ಪ್ರಕಾರ ಪ್ರತಿ ಎಕರೆಗೆ ಎಲ್ಲ ಖರ್ಚು ತೆಗೆದ ನಂತರ 60,000 ರೂ. ಲಾಭವಾಗಿದೆ.

## ಪಿ.ಎಮ್.ಎಫ್.ಎಮ್.ಇ. ಯೋಜನೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ

ಜಲಾನಯನ ಅಭಿವೃದ್ಧಿ ಇಲಾಖೆ ಹಾಗೂ ಕೃಷಿ ಇಲಾಖೆಯ ವತಿಯಿಂದ ರಾಯಚೂರು ಜಿಲ್ಲೆಯಲ್ಲಿ ಆರ್.ಕೆ.ವಿ.ವೈ. ಯೋಜನೆಯಡಿಯಲ್ಲಿ ರಚನೆಯಾದ ಸುಮಾರು 5 ರೈತ ಉತ್ಪಾದಕರ ಸಂಸ್ಥೆಗಳ ವತಿಯಿಂದ ಪ್ರಧಾನ ಮಂತ್ರಿಗಳ ಕೀರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆಗೆ (ಪಿ.ಎಮ್.ಎಫ್.ಎಮ್.ಇ.) ರೈತ ಉತ್ಪಾದಕರ ಕಂಪನಿಯ ವ್ಯಾಪ್ತಿಯಲ್ಲಿ ಬರುವ ಷೇರು ಸದಸ್ಯ ರೈತರಿಗೆ ಯೋಜನೆಯ ಬಗ್ಗೆ ಅರಿವು ಮೂಡಿಸಿ ಸುಮಾರು 216 ಅರ್ಜಿಗಳನ್ನು ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ ರಾಯಚೂರು ಅವರ ಮೂಲಕ ಸದರಿ ಯೋಜನೆಯ ಮೂಲಕ ಸಂಪನ್ಮೂಲ ವ್ಯಕ್ತಿಗಳಿಗೆ ಹಸ್ತಾಂತರ ಮಾಡಲಾಯಿತು.




## ಗ್ರಾಮ ಒನ್ ಫ್ರಾಂಚೈಸಿ ಕೇಂದ್ರವನ್ನು ತೆಗೆದ ಕೃಷಿಋಷಿ ರೈತ ಉತ್ಪಾದಕ ಕಂಪನಿ

ಕೃಷಿಋಷಿ ರೈತ ಉತ್ಪಾದಕ ಕಂಪನಿ ಚಿಕ್ಕಹೆಸರೂರು ಗ್ರಾಮದಲ್ಲಿ ದಿನಾಂಕ 29.08.2020 ರಂದು ನೋಂದಣಿಯಾಗಿದ್ದು, 10 ಹಳ್ಳಿಯ 1,000 ಕ್ಕೂ ಹೆಚ್ಚು ರೈತರು ಷೇರುದಾರರಾಗಿದ್ದಾರೆ. **"ಗ್ರಾಮ ಒನ್"** ಫ್ರಾಂಚೈಸಿ ಕೇಂದ್ರವನ್ನು ತೆಗೆದು ಗ್ರಾಮೀಣ ಪ್ರದೇಶದ ಸಮುದಾಯಕ್ಕೆ ಮತ್ತು ರೈತಾಪಿ ವರ್ಗಕ್ಕೆ ಹಾಗೂ ಎಲ್ಲಾ ವರ್ಗದ ಜನರಿಗೆ ಸರಕಾರದ ಸೇವೆಯನ್ನು ಒಂದೇ ಸೂರಿನಡಿಯಲ್ಲಿ ನೀಡುವ ಕಾರ್ಯಕ್ರಮವನ್ನು ಕೃಷಿ ಋಷಿ ರೈತ ಉತ್ಪಾದಕರ ಕಂಪನಿ ಮಾಡುತ್ತಿದೆ.



ಕೃಷಿ ಮಿಷಿನರಿ ಬ್ಯಾಂಕ್‌ನಿಂದ ಟ್ರಾಕ್ಟರ್ ಖರೀದಿಸಿದ್ದು, ಅದರಿಂದ 2021–22 ಸಾಲಿನಲ್ಲಿ 65,000 ರೂಪಾಯಿ ಆದಾಯ ಬಂದಿದ್ದು, ಹಲವಾರು ಗ್ರಾಮಗಳ ರೈತರಿಗೆ ತುಂಬಾ ಉಪಯುಕ್ತವಾಗಿದೆ. ಪ್ರಸ್ತುತ ಸಮಯದಲ್ಲಿ ಕೃಷಿಋಷಿ ರೈತ ಉತ್ಪಾದಕ ಕಂಪನಿಯಲ್ಲಿ ಷೇರುದಾರ ರೈತರ ಬೇಡಿಕೆಯಂತೆ ಸುಮಾರು 4 ಲಕ್ಷ ರೂಪಾಯಿ ಮೌಲ್ಯದ ಬಿತ್ತನೆ ಬೀಜಗಳನ್ನು ಖರೀದಿಸಿ ಷೇರುದಾರ ರೈತರಿಗೆ ಮಾರಾಟ ಮಾಡಿ ಕಂಪನಿ 30,000 ರೂ. ಲಾಭ ಗಳಿಸಿದೆ. ಅದರ ಜೊತೆಗೆ ಕಂಪನಿಯ ವತಿಯಿಂದ ಸುಮಾರು 1.20 ಲಕ್ಷದ ಮೌಲ್ಯ ತಾಡಪಲ್‌ಗಳ ವ್ಯವಹಾರವನ್ನು ಮಾಡಿರುವುದರಿಂದ ಸುಮಾರು 7,000/– ರೂ.ಗಳ ಆದಾಯವನ್ನು ಗಳಿಸಿದೆ.

# ಪ್ರಚಲಿತ ಎಫ್.ಪಿ.ಒ ಸುದ್ದಿಗಳು

## ಹುನಗುಂದ ತೋಟಗಾರಿಕೆ ರೈತ ಉತ್ಪಾದಕ ಕಂಪನಿ ಲಿಮಿಟೆಡ್, ಸೂಳೇಭಾವಿ, ತಾ: ಹುನಗುಂದ, ಜಿ: ಬಾಗಲಕೋಟ

ಈ ಕಂಪನಿಯು ತೋಟಗಾರಿಕೆ ಇಲಾಖೆ ವತಿಯಿಂದ ಪ್ರೋತ್ಸಾಹಿತವಾಗಿದ್ದು, ಬಾಗಲಕೋಟ ಜಿಲ್ಲೆ, ಹುನಗುಂದ ತಾಲೂಕಿನ ಅಮಿನಗಡದ ಸುತ್ತಮುತ್ತ ಇರುವ 18 ಹಳ್ಳಿಗಳಲ್ಲಿ ಸಣ್ಣ ಮತ್ತು ಅತಿ ಸಣ್ಣ 1,100 ಹಿಡುವಳಿದಾರರನ್ನು ಷೇರುದಾರರನ್ನಾಗಿ ಹೊಂದಿದೆ. ಈ ಷೇರುದಾರ ರೈತರು ಬೆಳೆದ ಬೆಳೆಗಳಿಗೆ ನೇರ ಮಾರುಕಟ್ಟೆಯ ವ್ಯವಸ್ಥೆ ಮಾಡುವುದು ಈ ಕಂಪನಿಯ ಮೂಲ ಉದ್ದೇಶವಾಗಿದ್ದು, ರೈತರಿಗೆ ಮಧ್ಯವರ್ತಿಗಳಿಂದಾಗುವ ಬೆಲೆ ವೈಪರೀತ್ಯವನ್ನು ತಪ್ಪಿಸಲು ನೇರವಾಗಿ ಸ್ಥಳಿಯ ಹಾಗೂ ಹೊರ ರಾಜ್ಯದ ಖರೀದಿದಾರರೊಂದಿಗೆ ಒಪ್ಪಂದ ಕೃಷಿ ಪದ್ಧತಿಯ ಜೊತೆಗೆ ಮಾರುಕಟ್ಟೆಯ ವ್ಯವಸ್ಥೆಯನ್ನು ಮಾಡಿದ್ದಾರೆ.

ಸಂಸ್ಥೆಯಿಂದ ಷೇರುದಾರ ರೈತರಿಗೆ ರಸಗೊಬ್ಬರ, ಕೀಟನಾಶಕ ಹಾಗೂ ಬೀಜ, ಕೃಷಿ ಹಾಗೂ ತೋಟಗಾರಿಕೆ ಉಪಕರಣಗಳು, ಬಾಡಿಗೆ ಆಧಾರದಲ್ಲಿ ಯಂತ್ರೋಪಕರಣ, ಸಾಮಾನ್ಯ ಸೇವಾ ಕೇಂದ್ರ, ಕೋಲ್ಡ್ ಸ್ಟೋರೇಜ್ ವ್ಯವಸ್ಥೆ ಮತ್ತು ಮಣ್ಣು ಪರಿಕ್ಷಾ ಕೇಂದ್ರಗಳ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಈ ಕಂಪನಿಯ ಮುಖಾಂತರ ಒಪ್ಪಂದ ಕೃಷಿ ಪದ್ಧತಿಯಲ್ಲಿ ಮೆಣಸಿನಕಾಯಿ, ಸೊಯಾಬೀನ್, ಅರಿಷಿಣ, ಕೊತ್ತಂಬರಿ, ಅಜವಾನ್ ಮತ್ತು ಶುಂಠಿ ಬೆಳೆಗಳನ್ನು ಬೆಳೆದು ರಾಜ್ಯ ಹಾಗೂ ಹೊರರಾಜ್ಯಗಳ ವಿವಧ ಖಾಸಗಿ ಕಂಪನಿಗಳಿಗೆ ಮಾರಾಟ ಮಾಡಲಾಗುತ್ತಿದೆ. ಅದೇ ರೀತಿ ರೈತರಿಗೆ ಉತ್ಪಾದನೆಗೆ ಬೇಕಾದಂತಹ ಗುಣಮಟ್ಟದ ಒಣ ಮೆಣಸಿನಕಾಯಿ, ಸೋಯಾಬೀನ್, ತೊಗರಿ, ಗೋವಿನಜೋಳ, ಸೂರ್ಯಕಾಂತಿ ಹಾಗೂ ಅರಿಷಿಣ ಬೀಜಗಳನ್ನು ಮತ್ತು ರಸಗೊಬ್ಬರಗಳನ್ನು ಸಮಯಕ್ಕೆ ಸರಿಯಾಗಿ ಯೋಗ್ಯ ದರದಲ್ಲಿ ಒದಗಿಸಲಾಗುತ್ತಿದೆ. ಸರ್ಕಾರದ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ತೊಗರಿ ಖರೀದಿ ಮಾಡಿ ಖಾಸಗಿ ಕಂಪನಿಗಳಿಗೆ ಮಾರಾಟ ಮಾಡಿರುತ್ತಾರೆ. ಹಾಗೆಯೇ ವಿವಿಧ ಎಫ್‌ಪಿಒಗಳ ಜೊತೆಗೆ ಒಪ್ಪಂದವನ್ನು ಮಾಡಿಕೊಂಡು ಅವರು ಬೆಳೆದಂತಹ ಸುಮಾರು 500 ಟನ್ ಅರಿಷಿಣವನ್ನು ಖರೀದಿಸಿ, ಖಾಸಗಿ ಕಂಪನಿಗಳಿಗೆ ಮಾರಾಟ ಮಾಡಿ ಬೇರೆ ಎಫ್‌ಪಿಒಗಳಿಗೂ ವ್ಯವಹಾರ ಮಾಡುವಲ್ಲಿ ನೆರವಾಗಿದೆ. ಆಧುನಿಕ ತಂತ್ರಜ್ಞಾನವಾದ ಡ್ರೋಣ್ ಮುಖಾಂತರ ಬೆಳೆಗಳಿಗೆ ಔಷಧಿಯನ್ನು ಸಿಂಪರಣೆ ಮಾಡುವ ಪ್ರಾತ್ಯಕ್ಷತೆಯನ್ನು ಕೈಗೊಳ್ಳಲಾಗಿದೆ.











ಕಾರ್ಯ ಚಟುವಟಿಕೆಗಳ ಚಿತ್ರಗಳು

# ಪ್ರಚಲಿತ ಎಫ್.ಪಿ.ಒ ಸುದ್ದಿಗಳು

## ಅನ್ನದಾತರ ಬಾಳುಬೆಳಗಿದ ಸ್ವಾಸ್ಥ್ಯ ರೈತ ಉತ್ಪಾದಕರ ಕಂಪನಿ, ಸಿಂಧನೂರು, ರಾಯಚೂರು ಜಿಲ್ಲೆ

ರೈತರಿಗೆ ಉತ್ತಮ ಸೇವೆ ನೀಡುವ ಜೊತೆಗೆ ತಂತ್ರಜ್ಞಾನದ ಮೂಲಕ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸಿಕೊಡುವಲ್ಲಿ ಕ್ರಿಯಾಶೀಲವಾಗಿರುವ ಸಿಂಧನೂರಿನ ನಬಾರ್ಡ್ ಪ್ರೋತ್ಸಾಹಿತ ಸ್ವಾಸ್ಥ್ಯ ರೈತ ಉತ್ಪಾದಕರ ಕಂಪನಿಯೂ ರಾಜ್ಯ ಸರ್ಕಾರದಿಂದ ಪ್ರಶಸ್ತಿ ಪಡೆದುಕೊಂಡಿದೆ. ಈ ಸಂಸ್ಥೆಯು 2019 ರಲ್ಲಿ 1,000 ಷೇರುದಾರರನ್ನೊಳಗೊಂಡು ಪ್ರಾರಂಭವಾಗಿದ್ದು, ಕಂಪನಿಯ ಆಸ್ತಿಯನ್ನು ರೂ. 40 ಲಕ್ಷಕ್ಕೆ ವೃದ್ಧಿಸಿದೆ. 2021–22 ನೇ ಸಾಲಿನಲ್ಲಿ ರೂ.1.30 ಕೋಟಿ ಮೊತ್ತದ ಭತ್ತ, ಎಣ್ಣೆಗಳು, ಕಡಲೆ ಖರೀದಿ ಹಾಗೂ ಬೇರೆ ಕಂಪನಿಗಳಿಗೆ ಮಾರಾಟ ಮಾಡುವ ಮೂಲಕ ಉತ್ತಮ ವಹಿವಾಟು ನಡೆಸಲಾಗಿದೆ. ಅಲ್ಲದೆ ಶೇಂಗಾ, ಕುಸುಬೆ, ಎಳ್ಳು, ಕೊಬ್ಬರಿ, ಸೂರ್ಯಪಾನವನ್ನು ಖರೀದಿಸಿ ತಮ್ಮದೇ ಗಾಣದಲ್ಲಿ ಎಣ್ಣೆಗಳನ್ನು ತಯಾರಿಸಿ, ಮಾರಾಟ ಮಾಡಲಾಗುತ್ತಿವೆ. ಈ ಕಂಪನಿಯು ತಮ್ಮದೆಯಾದ "ಸ್ವಾಸ್ತ್ಯ ಬ್ರಾಂಡ್" ಹೆಸರಿನೊಂದಿಗೆ ಎಫ್‌ಎಸ್‌ಎಸ್‌ಎಆಯ್ ನಿಂದ ಮಾನ್ಯತೆ ಪಡೆದು ಸಾವಯವ ಅಕ್ಕಿ, ಸಿರಿದಾನ್ಯಗಳು, ಜೇನುತುಪ್ಪ ಮತ್ತು ಇತರೆ ಉತ್ಪನ್ನಗಳ ಮಾರಾಟ ಮಾಡುತ್ತಿದೆ. ರೈತರು ಬೆಳೆದ ಬೆಳೆಗಳಿಗೆ ಉತ್ತಮ ಮಾರುಕಟ್ಟೆ ಒದಗಿಸುವುದು, ದೊಡ್ಡ ಕಂಪನಿಗಳಿಗೆ ಬೆಳೆದ ಉತ್ಪನ್ನಗಳನ್ನು ಬೆಳೆ ಮಾರಾಟ ಮಾಡಿಸುವುದು, ಸದಸ್ಯ ರೈತರು ಬೆಳೆದ ಹಣ್ಣು ಮತ್ತು ತೋಟಗಾರಿಕೆ ಬೆಳೆಗಳು ಹಾಳಾಗದಂತೆ ಸೋಲಾರ್ ಚಾಲಿತ್ ಕೋಲ್ಡ್ ಸ್ಟೋರೇಜ್ ವ್ಯವಸ್ಥೆ ಸೇರಿದಂತೆ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕೈಗೊಂಡಿರುವ ಕಾರ್ಯಗಳಿಗೆ ಸರಕಾರದ ಗಮನಸೆಳೆದಿದೆ. ಜಲಾನಯನ ಅಭಿವೃದ್ಧಿ ಇಲಾಖೆಯಿಂದ ರಾಜ್ಯದ ಐದು ರೈತ ಕಂಪನಿಗಳಿಗೆ ಸರಕಾರದಿಂದ ಅಭಿನಂದಿಸಲಾಗಿದ್ದು ಇದರಲ್ಲಿ ಈ ಕಂಪನಿಯೂ ಒಂದು.


ಸೆಲ್ಕೋ ಫೌಂಡೇಶನ್ ಸಹಾಯದಿಂದ ಸೌರಚಾಲಿತ ಎಣ್ಣೆಗಾಣ, 8 ಮೆಟ್ರಿಕ್ ಟನ್ ಸಾಮರ್ಥ್ಯದ ಒಂದು ಸೋಲಾರ್ ಚಾಲಿತ ಕೋಲ್ಡ್ ಸ್ಟೋರೇಜ್ ಸೇರಿದಂತೆ ಎಲ್ಲದಕ್ಕೂ ಸೋಲಾರ್ ವ್ಯವಸ್ಥೆ ಕಲ್ಪಿಸಿದ್ದರಿಂದ 20 ಕೀಲೋ ವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಕಂಪನಿಯು ಸೋಲಾರ್ ಚಾಲಿತ 4 ಎಣ್ಣೆಗಾಣಗಳು, 1 ಶೇಂಗಾ ಸಿಪ್ಪೆಯನ್ನು ತೆಗೆಯುವ ಯಂತ್ರ, 1 ಪ್ರೀಕ್ಲೀನರ್, 1 ಡಿಸ್ಟೋನರ್, ಮಿಲ್ಲೆಟ್ಸ್ ಪ್ರೋಸೆಸಿಂಗ್ ಯೂನಿಟ್, ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ ಸೋಲಾರ್ ಚಾಲಿತ ಸ್ಪ್ರೇಯರ್, ಕೃಷಿ ಇಲಾಖೆಯಿಂದ 1 ಟ್ರ್ಯಾಕ್ಟರ್, ರೋಟೋವೇಟರ್ ಹಾಗೂ ಗೊಬ್ಬರ ಹರಡುವ ಯಂತ್ರಗಳನ್ನು ಹೊಂದಿದೆ.



**ರೈತರ ಅಭಿವೃದ್ಧಿಗಾಗಿ ಹೊಸ ಯೋಜನೆಗಳು:** ಸ್ವಾಸ್ಥ್ಯ ಕಂಪನಿಯಿಂದ ಮುಂದಿನ ದಿನಗಳಲ್ಲಿ ರೈತರಿಗೆ **ಕ್ರೆಡಿಟ್ ಕಾರ್ಡ್ ಸೌಲಭ್ಯ** ದೊರಕಿಸುವ ಚಿಂತನೆ ನಡೆದಿದೆ. 30 ಸಾವಿರ ರೂ.ವರೆಗೆ ಬಡ್ಡಿ ರಹಿತವಾಗಿ ಸಾಲ ಸೌಕರ್ಯ ನೀಡುತ್ತಿದ್ದು, ಕೆಡಿಟ್ ಕಾರ್ಡ್ ಮೂಲಕವೇ ರೈತರು ಗೊಬ್ಬರ, ಕ್ರಿಮಿನಾಶಕ ಸೇರಿ ಬೆಳೆಗಳಿಗೆ ಬೇಕಾದ ಅವಶ್ಯ ಸಾಮಗ್ರಿಗಳನ್ನು ಖರೀದಿಸಬಹುದಾಗಿದೆ. ವರ್ಷದಿಂದ ವರ್ಷಕ್ಕೆ ಕ್ರೆಡಿಟ್ ಕಾರ್ಡ್‌ನ ಮೊತ್ತವನ್ನು ಹೆಚ್ಚಿಸುವ ಉದ್ದೇಶವನ್ನು ಕೂಡಾ ಹೊಂದಲಾಗಿದೆ. ಈ ಕಂಪನಿಯ ಉತ್ಪನ್ನಗಳಿಗೆ ಈಗಾಗಲೇ ಹೊರ ಜಿಲ್ಲೆ ಮತ್ತು ಹೊರ ರಾಜ್ಯದಲ್ಲೂ ಬೇಡಿಕೆ ಬಂದಿದೆ. ಮುಂದಿನ ದಿನಗಳಲ್ಲಿ ವಹಿವಾಟು ಹೆಚ್ಚಿದಂತೆ ರೈತರಿಗೂ ಲಾಭವಾಗಲಿದೆ. ಕೃಷಿ ಕುರಿತಂತೆ ಮೊಬೈಲ್ ಆ್ಯಪ್ ಮಾಡಿ ಬೆಳೆ ಪದ್ಧತಿ, ರೋಗ ಬಾಧೆ ನಿಯಂತ್ರಣ ಕುರಿತಂತೆ ರೈತರಿಗೆ ಹೆಚ್ಚಿನ ಮಾಹಿತಿ ತಂತ್ರಜ್ಞಾನಗಳನ್ನು ನೀಡುವ ಚಿಂತನೆ ಮಾಡಲಾಗುತ್ತಿದೆ. ನಬಾರ್ಡ್ ಸಹಕಾರದೊಂದಿಗೆ **ಫ್ಲಿಪ್‌ಕಾರ್ಟ್** ಜೊತೆಗೂ ಒಪ್ಪಂದವಾಗಿದ್ದು ಮುಂದಿನ ದಿನಗಳಲ್ಲಿ ಕಂಪನಿಯ ಉತ್ಪಾದನೆಗಳನ್ನು ಆನ್‌ಲೈನ್‌ನಲ್ಲೂ ಲಭ್ಯವಾಗುವಂತೆ ಮಾಡುವ ಗುರಿ ಹೊಂದಿದೆ.





# ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಸಾಮರ್ಥ್ಯ ಬಲವರ್ಧನೆ ಚಟುವಟಿಕೆಗಳು

ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಜಲಾನಯನ ಅಭಿವೃದ್ಧಿ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆ, ಕೈಮಗ್ಗ ಮತ್ತು ಜವಳಿ ಇಲಾಖೆ, ಮೀನುಗಾರಿಕೆ ಇಲಾಖೆ, ಪಶುಪಾಲನಾ & ಪಶುವೈದ್ಯಕೀಯ ಸೇವಾ ಇಲಾಖೆಗಳು, ಕರ್ನಾಟಕ ಸರ್ಕಾರ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಇವರ ಸಹಯೋಗದೊಂದಿಗೆ ಕರ್ನಾಟಕ ಸರ್ಕಾರದ ಅಮೃತ ಯೋಜನೆಯಡಿಯಲ್ಲಿ ರಚಿಸಲಾದ ವಿವಿಧ ಇಲಾಖೆಗಳ ಪ್ರೋತ್ಸಾಹಿತ ಉತ್ಪಾದಕರ ಸಂಸ್ಥೆಗಳ ಆಡಳಿತ ಮಂಡಳಿಯ ನಿರ್ದೇಶಕರುಗಳಿಗೆ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಜಿಲ್ಲವಾರು ತರಬೇತಿಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಗಳಲ್ಲಿ ಪ್ರಮುಖವಾಗಿ ಉತ್ಪಾದಕ ಸಂಸ್ಥೆಗಳ ರಚನೆ, ಆಡಳಿತ, ವ್ಯವಹಾರ ಯೋಜನೆಗಳು, ಕಾನೂನಾತ್ಮಕ ಅನುಸರಣೆಗಳು ಮತ್ತು ಉತ್ಪಾದಕ ಸಂಸ್ಥೆಗಳಿಗೆ ಲಭ್ಯವಿರುವ ವಿವಿಧ ಹಣಕಾಸು ಸಹಾಯಗಳ ಬಗ್ಗೆ ತರಬೇತಿ ನೀಡಲಾಯಿತು. 2022ನೇ ಸಾಲಿನ ಮೊದಲನೇ ತ್ರೈಮಾಸಿಕದ ಏಪ್ರಿಲ್, ಮೇ ಮತ್ತು ಜೂನ್ ತಿಂಗಳುಗಳಲ್ಲಿ ಒಟ್ಟು 16 ತರಬೇತಿಗಳನ್ನು ವಿವಿಧ ಜಿಲ್ಲೆಗಳಲ್ಲಿ ಏರ್ಪಡಿಸಿದ್ದು, ವಿವಿಧ ಇಲಾಖೆಗಳ ಪ್ರೋತ್ಸಾಹಿತ 108 ಉತ್ಪಾದಕ ಸಂಸ್ಥೆಗಳ 981 ಕ್ಕೂ ಅಧಿಕ ಉತ್ಪಾದಕರ ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು. ಇಲಾಖಾವಾರು ಪ್ರೋತ್ಸಾಹಿತ ಉತ್ಪಾದಕರ ಸಂಸ್ಥೆಗಳ ಪದಾಧಿಕಾರಿಗಳಿಗೆ ನೀಡಿದ ತರಬೇತಿಯ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

**ಕೈಮಗ್ಗ ಮತ್ತು ಜವಳಿ ಇಲಾಖೆ ಪ್ರೋತ್ಸಾಹಿತ ಉತ್ಪಾದಕರ ಸಂಸ್ಥೆಗಳ ಪದಾಧಿಕಾರಿಗಳಿಗೆ ತರಬೇತಿ ನೀಡಿದ ವಿವರ**

| ಕ್ರ. ಸಂ. | ದಿನಾಂಕ | ಜಿಲ್ಲೆ | ನೇಕಾರರ ಉ.ಸಂಸ್ಥೆಗಳು | ಸ್ಥಳ |
|---|---|---|---|---|
| 1 | 17 & 18.05.22 | ಬೆಂಗಳೂರು ನಗರ | 5 | ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು |
| 2 | 19 & 20.05.22 | ಬೆಂಗಳೂರು (ಗ್ರಾ), ಚಾಮರಾಜನಗರ ಮತ್ತು ಚಿಕ್ಕಬಳ್ಳಾಪುರ | 6 | ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು |
| 3 | 26.05.22 | ತುಮಕೂರು ಮತ್ತು ಚಿತ್ರದುರ್ಗ | 5 | ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಚಿಕ್ಕನಹಳ್ಳಿ, ಸಿರಾ |
| 4 | 03.06.22 | ಗದಗ, ಕೊಪ್ಪಳ ಮತ್ತು ಧಾರವಾಡ | 4 | ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ, ಗದಗ |
| 5 | 15.06.22 | ಬೆಳಗಾವಿ | 4 | ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಅರಭಾವಿ, ಬೆಳಗಾವಿ |
| 6 | 22.06.22 | ಬಾಗಲಕೋಟೆ | 6 | ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ |
| | | ಒಟ್ಟು | 30 | |










ಕೈಮಗ್ಗ ಮತ್ತು ಜವಳಿ ಇಲಾಖೆ ಪ್ರೋತ್ಸಾಹಿತ ಉತ್ಪಾದಕರ ಸಂಸ್ಥೆಗಳ ಪದಾಧಿಕಾರಿಗಳಿಗೆ ಹಮ್ಮಿಕೊಂಡ ತರಬೇತಿಯ ಚಿತ್ರಣಗಳು

# ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಸಾಮರ್ಥ್ಯ ಬಲವರ್ಧನೆ ಚಟುವಟಿಕೆಗಳು

**ಜಲಾನಯನ ಅಭಿವೃದ್ಧಿ ಇಲಾಖೆ ಪ್ರೋತ್ಸಾಹಿತ ರೈತ ಉತ್ಪಾದಕರ ಸಂಸ್ಥೆಗಳ ಪದಾಧಿಕಾರಿಗಳಿಗೆ ತರಬೇತಿ ನೀಡಿದ ವಿವರ**

| ಕ್ರ. ಸಂ. | ದಿನಾಂಕ | ಜಿಲ್ಲೆ | ಒಟ್ಟು ಉ.ಸಂಸ್ಥೆಗಳು | ಸ್ಥಳ |
|---|---|---|---|---|
| 1 | 25 & 26.05.22 | ದಾವಣಗೆರೆ | 4 | ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ |
| 2 | 27 & 28.05.22 | ದಾವಣಗೆರೆ | 5 | ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ |
| 3 | 21.06.22 | ವಿಜಯಪುರ | 4 | ಕೃಷಿ ವಿಜ್ಞಾನ ಕೇಂದ್ರ, ಹಿಟ್ನಳ್ಳಿ ಫಾರ್ಮ್, ವಿಜಯಪುರ |
| 4 | 22.06.22 | ಬಾಗಲಕೋಟೆ | 2 | ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ |
| 5 | 28.06.22 | ಹಾವೇರಿ | 6 | ಜಿಲ್ಲಾ ಕೃಷಿ ತರಬೇತಿ ಕೇಂದ್ರ, ದೇವಿಹೊಸೂರು, ಹಾವೇರಿ |
| 6 | 28.06.22 | ಬೆಂಗಳೂರು (ಗ್ರಾ) ಮತ್ತು ಚಿಕ್ಕಬಳ್ಳಾಪುರ | 4 | ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು |
| 7 | 29.06.22 | ರಾಮನಗರ | 2 | ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು |
| 8 | 30.06.22 | ಶಿವಮೊಗ್ಗ | 2 | ಕೃಷಿ ವಿಜ್ಞಾನ ಕೇಂದ್ರ, ನವಿಲೆ, ಶಿವಮೊಗ್ಗ |
| | | **ಒಟ್ಟು** | **29** | |












**ಜಲಾನಯನ ಅಭಿವೃದ್ಧಿ ಇಲಾಖೆ ಪ್ರೋತ್ಸಾಹಿತ ಉತ್ಪಾದಕರ ಸಂಸ್ಥೆಗಳ ಪದಾಧಿಕಾರಿಗಳಿಗೆ ಹಮ್ಮಿಕೊಂಡ ತರಬೇತಿಯ ಚಿತ್ರಗಳು**

# ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಸಾಮರ್ಥ್ಯ ಬಲವರ್ಧನೆ ಚಟುವಟಿಕೆಗಳು

**ತೋಟಗಾರಿಕೆ ಇಲಾಖೆ ಪ್ರೋತ್ಸಾಹಿತ ಉತ್ಪಾದಕರ ಸಂಸ್ಥೆಗಳ ಪದಾಧಿಕಾರಿಗಳಿಗೆ ತರಬೇತಿ ನೀಡಿದ ವಿವರ**

| ಕ್ರ. ಸಂ. | ದಿನಾಂಕ | ಜಿಲ್ಲೆ | ಒಟ್ಟು ಉ.ಸಂಸ್ಥೆಗಳು | ಸ್ಥಳ |
|---|---|---|---|---|
| 1 | 25 & 26.05.22 | ದಾವಣಗೆರೆ | 1 | ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ |
| 2 | 27 & 28.05.22 | ದಾವಣಗೆರೆ | 1 | ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ |
| 3 | 21.06.22 | ವಿಜಯಪುರ | 3 | ಕೃಷಿ ವಿಜ್ಞಾನ ಕೇಂದ್ರ, ಹಿಟ್ನಳ್ಳಿ ಫಾರ್ಮ್, ವಿಜಯಪುರ |
| 4 | 22.06.22 | ಬಾಗಲಕೋಟೆ | 3 | ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ |
| 5 | 28.06.22 | ಬೆಂಗಳೂರು (ಗ್ರಾ) ಮತ್ತು ಚಿಕ್ಕಬಳ್ಳಾಪುರ | 1 | ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು |
| 6 | 29.06.22 | ಹಾವೇರಿ | 3 | ಜಿಲ್ಲಾ ಕೃಷಿ ತರಬೇತಿ ಕೇಂದ್ರ, ದೇವಿಹೊಸುರ, ಹಾವೇರಿ |
| 7 | 29.06.22 | ರಾಮನಗರ | 2 | ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು |
| 8 | 30.06.22 | ಶಿವಮೊಗ್ಗ | 2 | ಕೃಷಿ ವಿಜ್ಞಾನ ಕೇಂದ್ರ, ನವಿಲೆ, ಶಿವಮೊಗ್ಗ |
| | | **ಒಟ್ಟು** | **16** | |






**ತೋಟಗಾರಿಕೆ ಇಲಾಖೆ ಪ್ರೋತ್ಸಾಹಿತ ಉತ್ಪಾದಕರ ಸಂಸ್ಥೆಗಳ ಪದಾಧಿಕಾರಿಗಳಿಗೆ ಆಯೋಜಿಸಲಾದ ತರಬೇತಿಯ ಚಿತ್ರಗಳು**

# ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಸಾಮರ್ಥ್ಯ ಬಲವರ್ಧನೆ ಚಟುವಟಿಕೆಗಳು

**ರೇಷ್ಮೆ, ಮೀನುಗಾರಿಕೆ ಮತ್ತು ಪಶುಪಾಲನಾ ಹಾಗೂ ಪಶುವೈದ್ಯಕೀಯ ಸೇವಾ ಇಲಾಖೆಗಳಿಂದ ಪ್ರೋತ್ಸಾಹಿತ ಉತ್ಪಾದಕರ ಸಂಸ್ಥೆಗಳ ಪದಾಧಿಕಾರಿಗಳಿಗೆ ತರಬೇತಿ ನೀಡಿದ ವಿವರ**

| ಕ್ರ. ಸಂ. | ದಿನಾಂಕ | ಜಿಲ್ಲೆ | ರೇಷ್ಮೆ ಇಲಾಖೆಯ ರೈ.ಉ.ಸಂಸ್ಥೆಗಳು | ಮೀನುಗಾರಿಕೆ ಇಲಾಖೆಯ ಉ.ಸಂಸ್ಥೆಗಳು | ಪಶುಪಾಲನಾ ಹಾಗೂ ಪಶುವೈದ್ಯಕೀಯ ಸೇವಾ ಇಲಾಖೆಯ ಉ.ಸಂಸ್ಥೆಗಳು | ಸ್ಥಳ |
|---|---|---|---|---|---|---|
| 1 | 21.06.22 | ಬೆಂಗಳೂರು (ಗ್ರಾ), ಚಿಕ್ಕಬಳ್ಳಾಪುರ, ರಾಮನಗರ ಮತ್ತು ತುಮಕೂರು | 7 | – | – | ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು |
| 2 | 21.06.22 | ವಿಜಯಪುರ | 1 | 1 | 3 | ಕೃಷಿ ವಿಜ್ಞಾನ ಕೇಂದ್ರ, ಹಿಟ್ನಳ್ಳಿ ಫಾರ್ಮ್, ವಿಜಯಪುರ |
| 3 | 22.06.22 | ಬಾಗಲಕೋಟೆ | 1 | 2 | 3 | ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ |
| 4 | 24.06.22 | ಬೆಂಗಳೂರು (ಗ್ರಾ), ಬೆಂಗಳೂರು ನಗರ ಮತ್ತು ತುಮಕೂರು | – | 7 | – | ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು |
| 5 | 29.06.22 | ಹಾವೇರಿ | 2 | 2 | – | ಜಿಲ್ಲಾ ಕೃಷಿ ತರಬೇತಿ ಕೇಂದ್ರ, ದೇವಿಹೊಸುರ, ಹಾವೇರಿ |
| 6 | 30.06.22 | ಶಿವಮೊಗ್ಗ | – | 3 | 1 | ಕೃಷಿ ವಿಜ್ಞಾನ ಕೇಂದ್ರ, ನವಿಲೆ, ಶಿವಮೊಗ್ಗ |
| | | **ಒಟ್ಟು** | **11** | **15** | **7** | |






**ರೇಷ್ಮೆ, ಮೀನುಗಾರಿಕೆ ಮತ್ತು ಪಶುಪಾಲನಾ & ಪಶುವೈದ್ಯಕೀಯ ಸೇವಾ ಇಲಾಖೆಗಳ ಪ್ರೋತ್ಸಾಹಿತ ಉತ್ಪಾದಕರ ಸಂಸ್ಥೆಗಳ ಪದಾಧಿಕಾರಿಗಳಿಗೆ ಆಯೋಜಿಸಲಾದ ತರಬೇತಿಯ ಚಿತ್ರಣಗಳು**

# ಬುಡಕಟ್ಟು ರೈತ ಉತ್ಪಾದಕರ ಸಂಸ್ಥೆಗಳಿಗೆ ಭೂಸಂಪನ್ಮೂಲ ಮಾಹಿತಿ ಸಂಗ್ರಹಣೆ ತರಬೇತಿ ಕಾರ್ಯಾಗಾರ

ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಸಹಯೋಗದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಮೈಸೂರು ಜಿಲ್ಲೆಯ ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲೂಕುಗಳ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಪ್ರೋತ್ಸಾಹಿತ ಮೂರು ಬುಡಕಟ್ಟು ರೈತ ಉತ್ಪಾದಕರ ಸಂಸ್ಥೆಗಳಾದ ನಾಗಾಪುರ, ಹೆಬ್ಬಾಳ-ಶೆಟ್ಟಹಳ್ಳಿ (ಬಿರ್ಸಾ ಮುಂಡಾ) ಮತ್ತು ಬಸವನಗಿರಿ ಹಾಡಿಗಳಲ್ಲಿ ಭೂಸಂಪನ್ಮೂಲ ಮಾಹಿತಿ ಸಂಗ್ರಹಣೆ ತರಬೇತಿ ಕಾರ್ಯಾಗಾರವನ್ನು ದಿನಾಂಕ 1 ರಿಂದ 9 ಜೂನ್ 2022 ರವರೆಗೆ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿ ಕಾರ್ಯಾಗಾರದಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ನಿರ್ದೇಶಕರಾದ ಡಾ.ಅಶೋಕ ಎಸ್. ಆಲೂರ ಮತ್ತು ಅವರ ತಂಡದ ಸದಸ್ಯರು ಹಾಗೂ ತೋಟಗಾರಿಕೆ ಮಹಾವಿದ್ಯಾಲಯ, ಬೀದರನ ಸಹಪ್ರಾಧ್ಯಾಪಕರಾದ ಡಾ. ಪ್ರವೀಣ ಜೋಳ್ಗಿಕರ್, ಡಾ. ಪ್ರವೀಣ ನಾಯ್ಕೋಡಿ ಹಾಗೂ ಅವರ ಮಣ್ಣು ತಜ್ಞರ ತಂಡವು ಭಾಗವಹಿಸಿತ್ತು. ಈ ತರಬೇತಿ ಕಾರ್ಯಾಗಾರದಲ್ಲಿ ವಿವಿಧ ವಿಷಯಗಳಾದ ಮಣ್ಣು ಸಮೀಕ್ಷೆಯ ಉದ್ದೇಶ, ಸಮೀಕ್ಷೆ ಕೈಗೊಳ್ಳುವ ವಿಧಾನ, ಮಣ್ಣಿನ ಗುಣಲಕ್ಷಣಗಳು, ಭೂ ಬಳಕೆ/ಭೂ ಹೊದಿಕೆ, ಗ್ರಿಡ್ ಮಾದರಿಗಳ ಸಂಗ್ರಹಣೆ, ಸ್ಥಳದ ವಿವರ, ನಿರ್ಧಿಷ್ಟ ಹಿಡುವಳಿ ಮಾಹಿತಿ ಸಂಗ್ರಹಣೆ, ಮಣ್ಣಿನ ಪಾರ್ಶ್ವ ದೃಶ್ಯಗಳ (ಪ್ರೋಫೈಲ್) ಅಧ್ಯಯನ, ಇವೆಲ್ಲವುಗಳ ಬಗ್ಗೆ ವಿವರವಾಗಿ ತರಬೇತಿ ನೀಡಲಾಯಿತು.

**ಬುಡಕಟ್ಟು ರೈತ ಉತ್ಪಾದಕರ ಕಂಪನಿಗಳಿಗೆ ನೀಡಿದ ತರಬೇತಿಗಳ ವಿವರ:**

- ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇವರ ಸಹಯೋಗದೊಂದಿಗೆ ಬುಡಕಟ್ಟು ರೈತ ಉತ್ಪಾದಕರ ಸಂಸ್ಥೆಗಳ ಸದಸ್ಯ ರೈತರಿಗೆ ತರಬೇತಿಗಳನ್ನು ಹಮ್ಮಿಕೊಳ್ಳಲಾಗತ್ತು.
- ಹತ್ತಿ ಮತ್ತು ಮೆಕ್ಕೆಜೋಳದ ಬೆಳೆಗಳಲ್ಲಿ ಸುಧಾರಿತ ಬೇಸಾಯ ಪದ್ಧತಿಗಳ ಕುರಿತು ತರಬೇತಿಯನ್ನು ಅಖಿಲ ಭಾರತ ಸಂಯೋಜಿತ ಸಂಶೋಧನಾ ಯೋಜನೆ, ಚಾಮರಾಜನಗರ ಇವರ ಸಹಯೋಗಲ್ಲಿ ಹಾಗೂ ಪ್ರಾತ್ಯಕ್ಷತೆಯನ್ನು ಬಸವನಗಿರಿ "ಎ", "ಬಿ" ಮತ್ತು ಶೆಟ್ಟಹಳ್ಳಿ ಹಾಡಿಗಳಲ್ಲಿ ದಿನಾಂಕ 11 ರಿಂದ 14 ಮೇ 2022 ರವರೆಗೆ ನಡೆಸಲಾಯಿತು. ತಜ್ಞ ವಿಜ್ಞಾನಿಗಳಾದ ಡಾ. ಶಶಿಕುಮಾರ ಮತ್ತು ಡಾ. ಸುನೀಲ್ ಸಿ.ಎಮ್. ರವರಿಂದ ತರಬೇತಿ ಒದಗಿಸಲಾಯಿತು.
- ಮಾಸ್ತಿಗುಡಿ ಬುಡಕಟ್ಟು ರೈತ ಉತ್ಪಾದಕರ ಕಂಪನಿಯ 177 ಸದಸ್ಯ ರೈತರಿಗೆ ಸುಮಾರು 531 ಎಕರೆಗಳಿಗೆ ಬೇಕಾಗುವ 1,050 ಪ್ಯಾಕೇಟ್ ಮೆಕ್ಕೆಜೋಳದ ಬಿತ್ತನೆ ಬೀಜವನ್ನು ಸ್ಥಳೀಯ ಅಭಿವೃದ್ಧಿ ಸಂಸ್ಥೆಗಳ ಸಹಕಾರದೊಂದಿಗೆ ದಿನಾಂಕ 27 ಜೂನ್ 2022 ರಂದು ವಿತರಿಸಲಾಯಿತು.
- ಹತ್ತಿ ಮತ್ತು ಮೆಕ್ಕೆಜೋಳದ ಬೆಳೆಗಳಲ್ಲಿ ಸಮಗ್ರ ಕೀಟ ನಿರ್ವಹಣೆ ತರಬೇತಿ ಕಾರ್ಯಾಗಾರವನ್ನು ಅಖಿಲ ಭಾರತ ಸಂಯೋಜಿತ ಸಂಶೋಧನಾ ಯೋಜನೆ, ಚಾಮರಾಜನಗರ ಇವರ ಸಹಯೋಗದಲ್ಲಿ ಬಸವನಗಿರಿ ಎ ಮತ್ತು ಬಿ ಹಾಡಿಗಳಲ್ಲಿ ದಿನಾಂಕ 9 ಜೂನ್ 2022 ರಂದು ನಡೆಸಲಾಯಿತು. ಕೀಟಶಾಸ್ತ್ರಜ್ಞರಾದ ಡಾ. ಶಿವರಾಯ ನಾವಿಯವರು ಕ್ಷೇತ್ರಭೇಟಿ ನೀಡಿ ನಂತರ ಮಾಹಿತಿಯನ್ನು ಹಂಚಿಕೊಂಡರು.
- ಅಣಬೆ ಕೃಷಿ ತರಬೇತಿಯನ್ನು ಜಿಕೆವಿಕೆ, ಬೆಂಗಳೂರು ಇವರ ಸಹಯೋಗದಲ್ಲಿ, ಬಸವನಗಿರಿ "ಎ" ಮತ್ತು "ಬಿ" ಹಾಡಿಗಳಲ್ಲಿ ದಿನಾಂಕ 11 ಮತ್ತು 12 ಜೂನ್ 2022 ರಂದು ನಡೆಸಲಾಯಿತು. ಜಿ.ಕೆ.ವಿ.ಕೆ.ಯ ಸೂಕ್ಷ್ಮಜೀವಾಣು ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಉಮಾಶಂಕರ ಹಾಗೂ ಪ್ರಾಧ್ಯಾಪಕರಾದ ಡಾ.ನಾಗೇಶರವರು ಈ ತರಬೇತಿಯಲ್ಲಿ ನಡೆಸಿಕೊಟ್ಟರು.






# ಏಪ್ರಿಲ್–ಜೂನ್  2022ರ ವ್ಯಾಪಾರದ ವಹಿವಾಟನಲ್ಲಿ ಮುಂಚೂಣಿಯಲ್ಲಿರುವ 10 ರೈತ ಉತ್ಪಾದಕ ಕಂಪನಿಗಳು

| ಕ್ರ. ಸಂ. | ಎಫ್.ಪಿ.ಓ. ಹೆಸರು | ಸ್ಥಳ | ಪ್ರೋತ್ಸಾಹಿಸುವ ಇಲಾಖೆ | ವ್ಯಾಪಾರ ಚಟುವಟಿಕೆಗಳು | 2022ನೇ ಸಾಲಿನ ಮೊದಲನೇ ತ್ರೈಮಾಸಿಕದ ತಿಂಗಳುವಾರು ಒಟ್ಟು ವ್ಯಾಪಾರ ವಹಿವಾಟು ಮೌಲ್ಯ (ರೂ.ಲಕ್ಷಗಳಲ್ಲಿ) | | | | | | | | | | | | |
|---|---|---|---|---|---|---|---|---|---|---|---|---|---|---|---|---|---|
| | | | | | ಏಪ್ರಿಲ್ | | | | ಮೇ | | | | ಜೂನ್ | | | | |
| | | | | | ಪರಿಕರಗಳ ವ್ಯಾಪಾರ | ಉತ್ಪನ್ನಗಳ ವ್ಯಾಪಾರ | ಸೇವೆಗಳ ವ್ಯಾಪಾರ | ಒಟ್ಟು (a) | ಪರಿಕರಗಳ ವ್ಯಾಪಾರ | ಉತ್ಪನ್ನಗಳ ವ್ಯಾಪಾರ | ಸೇವೆಗಳ ವ್ಯಾಪಾರ | ಒಟ್ಟು (b) | ಪರಿಕರಗಳ ವ್ಯಾಪಾರ | ಉತ್ಪನ್ನಗಳ ವ್ಯಾಪಾರ | ಸೇವೆಗಳ ವ್ಯಾಪಾರ | ಒಟ್ಟು (c) | (a+b+c) ಒಟ್ಟು |
| 1 | ಹುನಗುಂದ ತೋಟಗಾರಿಕೆ ರೈ.ಉ.ಕಂ.ನಿ.* | ಹುನಗುಂದ | ತೋ.ಇ. | ಬಿತ್ತನೆ ಬೀಜ, ಗೊಬ್ಬರ ಅರಿಶಿಣ ಮತ್ತು ತೊಗರಿ ಬೇಳೆ | 0.2 | 162.5 | 0.0 | 162.7 | 0.2 | 253.2 | 0.1 | 253.4 | 1.4 | 60.4 | 0.1 | 61.9 | 478.0 |
| 2 | ಆನೇಕಲ್ ತೋಟಗಾರಿಕೆ ರೈ.ಉ.ಕಂ.ನಿ.* | ಆನೇಕಲ್ | ತೋ.ಇ. | ಗೊಬ್ಬರ (ಡಿಎಪಿ) ಮತ್ತು ಗಜ್ಜರಿ | 32.8 | 6.6 | 2.2 | 41.6 | 50.3 | 15.5 | 1.0 | 66.8 | 55.9 | 15.3 | 2.1 | 73.3 | 181.6 |
| 3 | ಹಂಚಿ–ಭಾರಂಗಿ ರೈ.ಉ.ಕಂ.ನಿ.* | ಭಾರಂಗಿ | ಜ.ಅ.ಇ | ಬಿತ್ತನೆ ಬೀಜ ಮತ್ತು ಗೊಬ್ಬರ | 21.0 | 0.0 | 0.5 | 21.4 | 25.1 | 0.0 | 0.6 | 25.7 | 16.8 | 0.0 | 0.3 | 17.1 | 64.2 |
| 4 | ಧರಣಿಸಿರಿ ರೈ.ಉ.ಕಂ.ನಿ.* | ಬಿಡದಿ | ಜ.ಅ.ಇ | ಗೊಬ್ಬರ, ಕೀಟನಾಶಕ ಮತ್ತು ಹಸಿರು ಮೆಣಸಿನಕಾಯಿ | 8.6 | 0.0 | 0.1 | 8.7 | 7.0 | 20.0 | 0.0 | 27.0 | 12.7 | 0.0 | 0.0 | 12.7 | 48.4 |
| 5 | ಸಾದಲಿಯಮ್ಮ ರೈ.ಉ.ಕಂ.ನಿ.* | ಸಾದಲಿ | ತೋ.ಇ. | ಕೀಟನಾಶಕ ಮತ್ತು ಗುಲಾಬಿ ಈರುಳ್ಳಿ | 4.2 | 19.0 | 0.6 | 23.7 | 7.2 | 12.5 | 0.6 | 20.3 | 2.9 | 0.0 | 0.0 | 2.9 | 46.9 |
| 6 | ಚೇಳೂರು ತೋಟಗಾರಿಕೆ ರೈ.ಉ.ಕಂ.ನಿ.* | ಚೇಳೂರು | ತೋ.ಇ. | ಗೊಬ್ಬರ, ಕೀಟನಾಶಕ, ಗುಲಾಬಿ ಈರುಳ್ಳಿ ಮತ್ತು ಬೀಟ್ರೂಟ್ | 3.6 | 12.4 | 0.8 | 16.7 | 6.1 | 15.8 | 0.9 | 22.8 | 4.6 | 0.0 | 0.2 | 4.8 | 44.4 |
| 7 | ದೇವನಗರಿ ತೋಟಗಾರಿಕೆ ರೈ.ಉ.ಕಂ.ನಿ.* | ದಾವಣಗೆರೆ | ತೋ.ಇ. | ಹನಿ ನೀರಾವರಿ ಸಾಮಗ್ರಿಗಳು ಗೊಬ್ಬರ ಮತ್ತು ಮುಸುಕಿನ ಜೋಳ | 5.0 | 4.0 | 0.1 | 9.1 | 6.5 | 0.0 | 0.1 | 6.6 | 15.0 | 0.0 | 0.4 | 15.4 | 31.1 |
| 8 | ಶ್ರೀ ಗ್ರಾಮದೇವಿ ರೈ.ಉ.ಕಂ.ನಿ.* | ಧಾರವಾಡ | ಜ.ಅ.ಇ | ಬಿತ್ತನೆ ಬೀಜ, ಗೊಬ್ಬರ, ನೀರಾವರಿ ಪಂಪ್ ಮತು ಟಾರ್ಪಾಲಿನ್ | 0.3 | 0.0 | 0.0 | 0.3 | 9.7 | 0.0 | 1.1 | 10.7 | 14.9 | 0.0 | 0.0 | 14.9 | 25.9 |
| 9 | ಹೊನಲು ರೈ.ಉ.ಕಂ.ನಿ.* | ಹೊಳಲ್ಕೆರೆ | ಜ.ಅ.ಇ | ಗೊಬ್ಬರ | 0.4 | 0.0 | 0.0 | 0.4 | 1.0 | 0.0 | 0.0 | 1.0 | 23.7 | 0.0 | 0.0 | 23.7 | 25.1 |
| 10 | ಶ್ರೀ ಕೈಲಾಸನಾಥ ರೈ.ಉ.ಕಂ.ನಿ.* | ಧರ್ಮಪುರ | ಪಶು ಸಂಗೋಪನೆ ಇಲಾಖೆ | ಗೊಬ್ಬರ | 0.7 | 0.7 | 0.7 | 2.2 | 1.5 | 1.5 | 1.5 | 4.6 | 4.0 | 4.0 | 4.0 | 12.1 | 18.9 |

* ರೈ.ಉ.ಕಂ.ನಿ.– ರೈತ ಉತ್ಪಾದಕ ಕಂಪನಿ ನಿಯಮಿತ

# ರೈತ ಉತ್ಪಾದಕರ ಸಂಸ್ಥೆಗಳು ಅನುಸರಿಸಬೇಕಾದ ಕಾನೂನು ಅನುಸರಣೆಗಳು

| ದಿನಾಂಕ | ಮೇ 2022 | ಜೂನ್ 2022 |
|---|---|---|
| 1 ನೇ | – | ಆಡಳಿತ ಮಂಡಳಿಯ ನಿರ್ದೇಶಕರಿಂದ ಫಾರ್ಮ್ ಎಮ್‌ಬಿಪಿ–1 ಸಲ್ಲಿಸುವುದು |
| 7 ನೇ | ಏಪ್ರಿಲ್ ತಿಂಗಳ ಟಿ.ಡಿ.ಎಸ್. ಪಾವತಿಸುವುದು | ಮೇ ತಿಂಗಳ ಟಿ.ಡಿ.ಎಸ್. ಪಾವತಿಸುವುದು |
| 10 ನೇ | ಏಪ್ರಿಲ್ ತಿಂಗಳ ಜಿ.ಎಸ್.ಟಿ.ಆರ್–1 ನ್ನು ಪಾವತಿಸುವುದು | ಮೇ ತಿಂಗಳ ಜಿ.ಎಸ್.ಟಿ.ಆರ್–1 ನ್ನು ಪಾವತಿಸುವುದು |
| 14 ನೇ | ಟಿ.ಡಿ.ಎಸ್ ಪ್ರಮಾಣಪತ್ರ (ಫಾರ್ಮ್ 16ಬಿ, 16ಸಿ & 16ಡಿ) [14 ಮೇ ಕೊನೆಯ ದಿನವಾಗಿರುತ್ತದೆ] | ಟಿ.ಡಿ.ಎಸ್ ಪ್ರಮಾಣಪತ್ರ (ಫಾರ್ಮ್ 16ಬಿ, 16ಸಿ & 16ಡಿ) [14 ಜೂನ್ ಕೊನೆಯ ದಿನವಾಗಿರುತ್ತದೆ] |
| 15 ನೇ | ▪ ಪಿ.ಎಫ್ ಠೇವಣಿ ಮಾಡುವುದು (ನಿಮಗೆ ಅನ್ವಯಿಸಿದಲ್ಲಿ ಮಾತ್ರ)<br>▪ ಇ.ಎಸ್.ಆಯ್ ಪಾವತಿಸುವುದು (ನಿಮಗೆ ಅನ್ವಯಿಸಿದಲ್ಲಿ ಮಾತ್ರ)<br>▪ ಟಿ.ಡಿ.ಎಸ್. ಸಲ್ಲಿಸುವುದು | ▪ 1ನೇ ತ್ರೈಮಾಸಿಕದ ಮುಂಗಡ ತೆರಿಗೆ ಪಾವತಿಸುವುದು<br>▪ ಪಿ.ಎಫ್ ಠೇವಣಿ ಮಾಡುವುದು (ನಿಮಗೆ ಅನ್ವಯಿಸಿದಲ್ಲಿ ಮಾತ್ರ)<br>▪ ಇ.ಎಸ್.ಆಯ್ ಪಾವತಿಸುವುದು (ನಿಮಗೆ ಅನ್ವಯಿಸಿದಲ್ಲಿ ಮಾತ್ರ)<br>▪ ಐಎನ್‌ಸಿ–22ಎ ಸಲ್ಲಿಸುವುದು |
| 20 ನೇ | ▪ ಏಪ್ರಿಲ್ ತಿಂಗಳ ಇನ್‌ವಾಯಿಸ್‌ಗಳಿಗೆ ಜಿ.ಎಸ್.ಟಿ ಪಾವತಿಸುವುದು<br>▪ ಏಪ್ರಿಲ್ ತಿಂಗಳ ಜಿ.ಎಸ್.ಟಿ.ಆರ್–3ಃ ನ್ನು ಪಾವತಿಸುವುದು<br>▪ ವೃತ್ತಿಪರ ತೆರಿಗೆ ಪಾವತಿಸುವುದು | ▪ ಮೇ ತಿಂಗಳ ಇನ್‌ವಾಯಿಸ್‌ಗಳಿಗೆ ಜಿ.ಎಸ್.ಟಿ ಪಾವತಿಸುವುದು<br>▪ ಮೇ ತಿಂಗಳ ಜಿ.ಎಸ್.ಟಿ.ಆರ್–3ಃ ನ್ನು ಪಾವತಿಸುವುದು<br>▪ ವೃತ್ತಿಪರ ತೆರಿಗೆ ಪಾವತಿಸುವುದು |
| 22 ನೇ | | ಆಡಳಿತ ಮಂಡಳಿಯ ಸಭಾ ಸೂಚಿಯನ್ನು 7 ದಿನಗಳ ಮುಂಚಿತವಾಗಿ ನೀಡಬೇಕು |
| 30 ನೇ | ▪ 4ನೇ ತ್ರೈಮಾಸಿಕದ ಟಿ.ಡಿ.ಎಸ್. ಫೈಲ್ ಮಾಡುವುದು<br>▪ ವೃತ್ತಿಪರ ತೆರಿಗೆ ಪಾವತಿಸುವುದು | ▪ ವಾರ್ಷಿಕ ಡಿಪಿಟಿ–3ನ್ನು ಸಲ್ಲಿಸುವುದು |


## ಸಂಪಾದಕೀಯ ಸಮಿತಿ

**ಪ್ರಕಾಶಕರು**

**ಡಾ. ಅಶೋಕ ಎಸ್. ಆಲೂರ,** ನಿರ್ದೇಶಕರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಠ ಕೇಂದ್ರ

**ಮುಖ್ಯ ಸಂಪಾದಕರು**

**ಡಾ.ಜಿ. ಬಸವರಾಜ್,** ಉಪನಿರ್ದೇಶಕರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಠ ಕೇಂದ್ರ

**ಸಂಪಾದಕರು**

**ಡಾ. ಇಟಗಿ ಪ್ರಭಾಕರ,** ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಠ ಕೇಂದ್ರ

**ಡಾ. ಶಶಿಭೂಷಣ ಘಟ್ಟಟ್ಟಿ,** ಹಿರಿಯ ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಠ ಕೇಂದ್ರ

**ಶ್ರೀ. ಮಂಜುನಾಥ ಎಂ,** ಹಿರಿಯ ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಠ ಕೇಂದ್ರ

**ಡಾ. ಕುಮಾರ ಎಸ್,** ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಠ ಕೇಂದ್ರ

**ಸಹ ಸಂಪಾದಕರು**

**ಶ್ರೀ. ಸುಧೀರ್ ಪಿ,** ಜಂಟಿ ನಿರ್ದೇಶಕರು, ಮೀನುಗಾರಿಕೆ ಇಲಾಖೆ

**ಶ್ರೀಮತಿ. ರಶ್ಮಿ ಅಲಿಯಾಸ್,** ಉಪನಿರ್ದೇಶಕರು, ಜ.ಅ.ಇ

**ಶ್ರೀ. ತಿಮ್ಮಯ್ಯ ಎ.ಜಿ.** ಉಪನಿರ್ದೇಶಕರು, ಜ.ಅ.ಇ

**ಶ್ರೀ. ಸುರೇಶ್ ಎಫ್.ಎ,** ಮುಖ್ಯ ಪಶುವೈದ್ಯಾಧಿಕಾರಿ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

**ಶ್ರೀಮತಿ. ಕ್ಷಮಾ ಪಾಟೀಲ್,** ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ

**ಶ್ರೀಮತಿ. ಸೀಮಾ,** ಉಪನಿರ್ದೇಶಕರು, ರೇಷ್ಮೆ ಇಲಾಖೆ

**ಶ್ರೀಮತಿ ದೀಪಿಕಾ ಜೇನಿ ಟರ್ಕಿ,** ಸಹಾಯಕ ಪ್ರಧಾನ ವ್ಯವಸ್ಥಾಪಕರು, ನಬಾರ್ಡ್



## ವಿಳಾಸ

**ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ**

ತೋಟಗಾರಿಕೆ ಮಹಾವಿದ್ಯಾಲಯ, ತೋ.ವಿ.ವಿ.ಆವರಣ, ಜಿ.ಕೆ.ವಿ.ಕೆ.ಅಂಚೆ, ಬೆಂಗಳೂರು–560065

ದೂರವಾಣಿ: +91–80–29721577; ಮೊಬೈಲ್: 94498 72877

ಮಿಂಚಂಚೆ: coefpo@gmail.com; ವೆಬ್‌ಸೈಟ್: www.coefpo.org